ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ

Chilume Circulated in and around 10 countries

ಸಂಪುಟ ೨, ಸಂಚಿಕೆ ೧೦, ಮಾರ್ಚ್ ೨೦೧೫

ಆಲಿವ್ ಎಣ್ಣೆ, ಹೃದಯರೋಗಿಗಳಿಗೊಂದು ವರವೇ - ಪುಟ ೬

ಸಾಮ್ರಾಜ್ಯ ಲಕ್ಷ್ಮೀ ರಾಜವಂಶದಲ್ಲಿ ಮಹಿಳೆಯ ಪಾತ್ರ - ನಾಗಶೈಲ ಕುಮಾರ್ - ಪುಟ ೨೦

ಯುಗಾದಿ ಹಬ್ಬದ ಶುಭಾಶಯಗಳು

ಸೀನುವಿನ ಬಜೆಟ್ ವ್ಯಾಖ್ಯಾನ - ಅಣಕು ರಾಮನಾಥರ ಹಾಸ್ಯ - ಪುಟ ೧೨

ಹೊಸ ಪರಿಚಯ – ಕಾವ್ಯದ ಮತ್ತಷ್ಟು ಚಿಗುರು - ಮಹಾಂತೇಶ್ ಸಿ. - ನಳಿನಾಕ್ಷಿ ಹೀನಗಾರ್ - ಪುಟ ೧೭

ಮಮತೆಯು ಚಿಗುರಲಿ

Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಈಗಿನ ಸುದ್ದಿ ... ಪು. ೧
ಸಂಪಾದಕೀಯ ... ಪು. ೩
ಆರೋಗ್ಯ - ಆಲಿವ್ ಎಣ್ಣೆ ... ಪು. ೬

ಚಿಲುಮೆಯ ಒಳಗೆ

ಪದ ಪುಂಜ/ರಂಗೋಲಿ ... ಪು. ೧೪
ಮಹಿಳಾ ದಿನಾಚರಣೆ – ಹಾಸ್ಯ ... ಪು. ೧೬
ಕರ್ನಾಟಕ –ರಾಜವಂಶಗಳು ... ಪು. ೨೦

ಚಿಲುಮೆಯ ಒಳಗೆ

ಮಾರ್ಕಸ್ ಔರೇಲಿಯಸ್ ... ಪು. ೬
ವಿಚಾರ-ವಿಹಾರ ... ಪು. ೧೧
ರಾಂ ರಾಮ! ಹಾಸ್ಯ ... ಪು. ೧೨

ಚಿಲುಮೆಯ ಒಳಗೆ

ವಿಜ್ಞಾನ ... ಪು. ೨೫
ಅಲ್ಲಲ್ಲಿ ಏನೇನು ... ಪು. ೨೫

ಚಿಲುಮೆಯ ಒಳಗೆ

ಕಥಾಚಿಲುಮೆ ... ಪು. ೧೫
ರೆಸಿಪಿ ಕೊಡ್ತೀರಾ! ... ಪು. ೧೫
ಕಾವ್ಯ ಚಿಲುಮೆ, ಹಾಸ್ಯ ಚಿಲುಮೆ ... ಪು. ೧೬

ಮಹಿಳಾ ದಿನಾಚರಣೆಯ ಶುಭಾಶಯಗಳು

ಈಗಿನ ಸುದ್ದಿ

ಸಿಡ್ನಿಯಲ್ಲಿ ಪುರಂದರ ದಾಸರ ಆರಾಧನೆ – ವರದಿ

ಪುರಂದರ ದಾಸರು ನಮ್ಮ ಸಂಗೀತ ಪಿತಾಮಹರೆಂದೇ ಪ್ರಸಿದ್ಧಿ. ಸರಳೆ ವರಸೆ, ಜಂಟಿ ವರಸೆ, ಅಲಂಕಾರಗಳು, ಪಿಳ್ಳಾರಿ ಗೀತೆಗಳು ಮತ್ತು ದೇವರನ್ನು ಒಲಿಸಿಕೊಳ್ಳಲು ಸುಲಭವಾದ ಮತ್ತು ಸರಳವಾದ ಭಾಷೆಯಲ್ಲಿ ಹಾಡುಗಳನ್ನು ರಚಿಸಿರುವ ಮಹಾನುಭಾವರು. ನಾಲಕ್ಕು ಲಕ್ಷಕ್ಕೂ ಹೆಚ್ಚಿನ ಹಾಡುಗಳನ್ನು ರಚಿಸಿದ್ದಾರೆ. ಆದರೆ ನಮಗೆ ಯಾವುದೇ ಹಾಡುಗಳ ವಿವರ ಯಾವ ಕಾಗದಲ್ಲಿಯು ಉಲ್ಲೆಖವಾಗಿಲ್ಲದಿರುವುದೇ ವಿಪರ್ಯಾಸ. ಎಲ್ಲಾ ಹಾಡುಗಳು ಒಬ್ಬರಿಂದ ಒಬ್ಬರು ಕೇಳಿ ಬಂದಿರುವುದು. ಅಂತ ಮಹಾನುಭಾವನ ನೆನಪಿಸಿಕೊಳ್ಳುವ ಸಲುವಾಗಿ ಆರಾಧನೆಯು ಸಿಡ್ನಿಯಲ್ಲಿ ನಡೆಯಿತು.

ಸಿಡ್ನಿ ಪುರಂದರ ಸಮಿತಿಯು ಪುರಂದರ ಆರಾಧನೆಯನ್ನು ೮ ಫೆಬ್ರವರಿ ಭಾನುವಾರದಂದು ಏರ್ಮಿಂಗ್ಟನ್ ಕಮ್ಯೂನಿಟಿ ಸಭಾಭವನದಲ್ಲಿ ಏರ್ಪಡಿಸಿತ್ತು. ಇದು ೧೫ನೆ ವರ್ಷದ ಆಚರಣೆ. ನನಗೆ ಮೂರ್ನಾಲ್ಕು ಕಡೆಯಿಂದ ಆರಾಧನೆ ವಿಷಯ ತಿಳಿದಿತ್ತು. ಭಾನುವಾರ ಬೆಳಿಗ್ಗೆ ಬಿಟ್ಟಕೆಲಸ ಬಿಟ್ಟ ಹಾಗೆ ಮನೆಯಿಂದ ಹೊರಟೆ. ಕಳೆದ ಮೂರು ನಾಲ್ಕು ವರ್ಷಗಳಿಂದ ಹೋಗುತಿದ್ದ ಕಾರ್ಯಕ್ರಮಕ್ಕೆ ತಪ್ಪಿಸಿಕೊಳ್ಳಲು ನಾನು ತಯಾರಿರಲಿಲ್ಲ. ಒಂಬತ್ತು ಗಂಟೆಗೆ ಸರಿಯಾಗಿ ಶುರುವಾಗಿದ್ದ ಕಾರ್ಯಕ್ರಮದಲ್ಲಿ, ಮೊದಲಿಗೆ ಹೆಂಗಸರು ಮತ್ತು ಗಂಡಸರು ರಾಗವಾಗಿ ನವರತ್ನ ಮಾಲಿಕೆಯನ್ನು ಹಾಡಿದರು. ಹಿನ್ನೆಲೆಯಲ್ಲಿ ದೊಡ್ಡದಾದ ಪುರಂದರದಾಸರ ಚಿತ್ರ, ಕೃಷ್ಣನ ಮೂರ್ತಿ ಸ್ಟೇಜ್ ಮೇಲೆ ಕಂಗೊಳಿಸುತ್ತಾ ಇದ್ದವು. ನವರತ್ನ ಮಾಲಿಕೆಯ ಕೆಲವು ಹಾಡುಗಳಲ್ಲಿ “ಓಡಿ ಬಾರಯ್ಯಾ ವೈಕುಂಟಪತಿ”, “ಕಲ್ಲು ಸಕ್ಕರೆ ಕೊಳ್ಳಿರೋ”, “ಪೋಗದಿರಲೋ ರಂಗ”, “ಕೃಷ್ಣ ಮೂರ್ತಿ ಕಣ್ಣ ಮುಂದೆ”, “ಇಂದಿನ ದಿನವೇ ಶುಭ ದಿನವು” ಒಳಗೊಂಡಿತ್ತು. ಎಲ್ಲಾ ಹಾಡುಗಳು ನಮ್ಮ ಮೈನಿಮಿರುವಂತೆ ಮಾಡುತಿತ್ತು. ಶ್ರೀಮತಿ ಶುಭಾ ರವಿಯವರು ಹಾಡುಗಳ ಅರ್ಥ ವಿವರಣೆಯನ್ನು ಸಭಿಕರಿಗೆ ಮನೋಜ್ಞವಾಗಿ ನೀಡಿದರು.

ಆರಾಧನೆಯ ಮುಖ್ಯ ವಿಷಯ “ಗುರು” ಪುರಂದರ ದಾಸರನ್ನು ದೊಡ್ಡ ಗುರುವಾಗಿ ನೋಡುವ ಸಲುವಾಗಿ. ಕಾರ್ಯಕ್ರಮದ ವಸ್ತು “ಗುರು” ಎಂದು ಸಿಡ್ನಿಯಲ್ಲಿ ಸಂಗೀತ ಪಾಠ ಮಾಡುವ ಎಲ್ಲ ಗುರುಗಳಿಂದ ಒಳಗೊಂಡಿತ್ತು ಈ ಕಾರ್ಯಕ್ರಮ. ಲಕ್ಷ್ಮಿ ಅಭಿಷೇಕ್ ರವರು ಗುರು ಯಾರು ? ಗುರುವಿನ ಮಹತ್ವ ಎಂಥದ್ದು ಎಂದು ಬಹಳ ಸವಿಸ್ತಾರವಾಗಿ ವಿವರಿಸಿದರು. ಪುರಂದರ ದಾಸರ ಗುರುಗಳು " ವ್ಯಾಸರಾಯ " ಪುರಂದರ ದಾಸರು ಬರೆದ ಹಾಡುಗಳನ್ನು ಪುರಂದರ ಉಪನಿಷತ್ ಎಂದೂ ಕರೆಯಲಾಗುವುದು. "ಕತ್ತಲೆಯ ಅಜ್ಞಾನದಿಂದ ಬೆಳಕಿನ ಜ್ಞಾನದ ಬಳಿ ಕರೆ ತರುವವನೇ ಗುರು " ನವವಿಧ ಭಕ್ತಿಯ ಮಾರ್ಗ ತೋರಿಸಿದ ಪುರಂದರರು ಒಂದು ದೇವರ ನಾಮದಲ್ಲಿ " ದೇವರ ನಾಮ ಸ್ಮರಣೆ ಮಾತ್ರವೇ ಸಾಕು ಮುಕ್ತಿಯ ಬಳಿಗೆ ಹೋಗಲು ಈ ಕಲಿಗಾಲದಲ್ಲಿ ಎನ್ನುತ್ತಾರೆ. ಗುರುವಿನ ಗುಲಾಮನಾಗುವ ತನಕ ಮುಕ್ತಿ ಸಿಗುವುದಿಲ್ಲ. ಏನೇ ಶಾಸ್ತ್ರ ವೇದಪಂಡಿತರಾದರೂ ಸಹ ಗುರುವಿನ ಪಾತ್ರ ದೊಡ್ಡದು. ಶ್ರೀಮತಿ ಲಕ್ಷ್ಮಿಯವರು ಕೆಲವು ದೇವರ ನಾಮವನ್ನು ಹಾಡಿ ಅವರ ಮಾತನ್ನು ಮುಗಿಸಿದರು.

Youth Teachers Segment ನಲ್ಲಿ ಲಕ್ಷ್ಮಿ ಅಭಿಷೇಕ್, ದೇವಿಕ ಕೃಷ್ಣಮೂರ್ತಿ, ಮತ್ತು ಕೃಷ್ಣ ರಾಮನಾಥನ್ " ವಂದಿಸೆವೆವುದಾದಿಯಲ್ಲಿ ಗಣನಾಥ ", "ಗುರು ರಾಯರ ನಂಬಿರೋ " " ರಾಮಕೃಷ್ಣರು ಮನೆಗೆ ಬಂದರು" ಹಾಡುಗಳನ್ನು ಲಯ,ತಾಳ ಬದ್ಧವಾಗಿ ಹಾಡಿದರು. ಆರಾಧನೆಯ ಮಧ್ಯದಲ್ಲಿ ಬಾಯಾರಿದ ಎಲ್ಲಾ ಸಭಿಕರಿಗೂ ಮಸಾಲೆ ಮಜ್ಜಿಗೆ ಸರಬರಾಜು ಮಾಡಲಾಯಿತು. ರೇಷ್ಮೆ ಲಂಗ ತೊಟ್ಟ ಪುಟ್ಟ ಬಾಲೆಯರು ಕುಡಿದ ಮಜ್ಜಿಗೆ ಲೋಟವನ್ನು ಬಿನ್ ಕವರ್ನಲ್ಲಿ ಹಾಕುತಿದ್ದು ನೋಡಿ ಬಹಳ ಸಂತೋಷವಾಯಿತು. ಸಭಿಕರು ಮತ್ತೆ ಕಾರ್ಯಕ್ರಮದ ವೀಕ್ಷಣೆ ಸುಲಲಿತವಾಗಿ ಕುರ್ಚಿಯಿಂದ ಏಳದೇ ಮುಂದುವರಿಯಿತು.

ಮುಂದಿನ ಪುಟ ನೋಡಿ ...

ಕೇಳೋಣ

ಜಿ.ಎಸ್.ಎಸ್ ರವರ
“ಋತು ವಸಂತ ...” ಕೇಳಲು
ಮೇಲಿನ ಚಿತ್ರವನ್ನು ಕ್ಲಿಕ್ ಮಾಡಿ (Click picture to view)

“ಸಾಮ್ರಾಜ್ಯ ಲಕ್ಷ್ಮೀ” ರಾಜವಂಶದಲ್ಲಿ ಮಹಿಳೆಯ ಪಾತ್ರ
ಪುಟ ೨೦

ಜಿ.ಎಸ್.ಎಸ್ ರವರ
“ಸ್ತ್ರೀ ಎಂದರೆ ...” ಕೇಳಲು
ಮೇಲಿನ ಚಿತ್ರವನ್ನು ಕ್ಲಿಕ್ ಮಾಡಿ (Click picture to view)

ನೋಡೋಣ

ಸಿಡ್ನಿಯಲ್ಲಿ ಪುರಂದರ ದಾಸರ ಆರಾಧನೆ – ವರದಿ

ವಿಶ್ವ ಹಿಂದೂ ಪರಿಷತ್ ಸಿಡ್ನಿ ಆರಾಧನೆಯ ಮುಖ್ಯ ಪ್ರಾಯೋಜಕರು. Dr ಶೋಭಾ ಬಾಲಸಂಸ್ಕಾರ ಕೇಂದ್ರದ ಕಾರ್ಯಾಚರಣೆ ಬಗ್ಗೆ ಒಂದೆರಡು ಮಾತನಾಡಿದರು. ಸಿಡ್ನಿಯಲ್ಲಿ ನಡೆಯುವ ವೇದಶಾಲೆ, ಸಂಸ್ಕೃತಶಾಲೆ, ರುದ್ರ,ಉಪನಿಷತ್ ಪಾಠಗಳ ಬಗ್ಗೆ ವಿವರ ನೀಡಿ, ಆಸಕ್ತರಿಗೆ ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ ಕೂಡ ನೀಡಿದರು.

ಇನ್ಸ್ಟ್ರುಮೆಂಟ್ ಸೆಗ್ಮೆಂಟ್ ನಲ್ಲಿ ಶ್ರೀಮತಿ ಪೂರ್ಣಿಮಾ ನಾಗರಾಜ್ ವೀಣೆ, ಶ್ರೀಮತಿ ದೇವಕಿ ವಿಜ್ಞೇಶ್ ಕೊಳಲು, ಕ್ರಾಂತಿ ಕಿರಣ್ ವಯೊಲಿನ್ ನುಡಿಸಿದರು. “ಎನಗೂ ಆಣೆ ರಂಗ”, “ಯಾರೇ ರಂಗನ”, “ವೆಂಕಟಾಚಲ ನಿಲಯಂ”, “ಜಗದೊದ್ಧಾರನ” ಹಾಡುಗಳು ಸಭಿಕರನ್ನು ಮಂತ್ರ ಮುಗ್ಧರನ್ನಾಗಿಸಿತು.

ಸೀನಿಯರ್ ಸೆಗ್ಮೆಂಟ್ ನಲ್ಲಿ ಶ್ರೀಮತಿ ಪ್ರೇಮ ಆನಂದಶ್ರೀಕೃಷ್ಣನ್, ಚಿತ್ರ ಕೃಷ್ಣಮೂರ್ತಿ, ಮೈಥಿಲಿಮಲ್ಲಿ ಅಯ್ಯರ್, ಕಲಾ ಶರ್ಮ ಮತ್ತು ಚಾರುಮತಿ ಅಯ್ಯರ್ " ನೋಡುವುದೇ ಕಣ್ಣು ", "ವೆಂಕಟ ರಮಣನೆ ಬಾರೋ ", "ಇನ್ನು ದಯಾ ಬಾರದೆ " ಕ್ಷೀರಾಬ್ಧಿ ಕನ್ನಿಕೆ (ರಾಗ ಮಾಲಿಕ) ಹಾಡಿ ಎಲ್ಲರನ್ನೂ ಸಂತುಷ್ಟಗೊಳಿಸಿದರು.

ಶ್ರೀ ಸುಬ್ರಮಣ್ಯರವರು ಕಡೆಯಲ್ಲಿ ವಂದನಾರ್ಪಣೆ ಮಾಡಿ, ಅಂದಿನ ಕಾರ್ಯಕ್ರಮಕ್ಕೆ ಪರೋಕ್ಷವಾಗಿ ಸಹಾಯ ಮಾಡಿದ ಎಲ್ಲರನ್ನೂ ನೆನೆದರು.

ಮಹಾ ಮಂಗಳಾರತಿಯಾದ ನಂತರ ಶ್ರೀಮತಿ ಮೇಧಾ ಪಾಟಕ್ ಹಿಂದೂಸ್ಥಾನಿ ಶೈಲಿ ಯಲ್ಲಿ ಹಾಡಿದ ಜನಪ್ರಿಯ ಭಾಗ್ಯಾದ ಲಕ್ಷ್ಮಿ ಬಾರಮ್ಮ ಹಾಡಿಗೆ ಅರುಣ ಗಾಂಧಿ ಮತ್ತು ವಿದ್ಯಾ ಐ ಭಟ್ ರವರು ಭರತ ನಾಟ್ಯ ಮಾಡಿ ಸಭಿಕರ ಸಂತೋಷವನ್ನು ಇಮ್ಮಡಿಗೊಳಿಸಿದರು.

ಮಹಾ ಪ್ರಸಾದ ಕರ್ನಾಟಕದ ಹೆಸರುವಾಸಿ ತಿಂಡಿಗಳಾದ ಬಿಸಿಬೇಳೆ ಬಾತ್, ಮೊಸರನ್ನ, ಮೈಸೂರ್ ಪಾಕ್ ಬಂದವರೆಲ್ಲರ ಹೊಟ್ಟೆ ಕೂಡ ತುಂಬಿಸಿತು.

ಪುರಂದರ ಆರಾಧನೆಯ ಅಂಗವಾಗಿ ಸಿಡ್ನಿಯ ಎಲ್ಲ ಸಂಗೀತ ಆಸಕ್ತರೂ ಒಂದೆಡೆ ಸೇರುವಂತಾಗಿತ್ತು. ಮುಂದಿನ ಆರಾಧನೆಗೆ ಒಂದು ವರ್ಷ ಕಾಯಬೇಕಲ್ಲ ಎಂಬ ಭಾವನೆಯಿಂದ ನನ್ನ ವರದಿಯನ್ನು ಅಂತ್ಯಗೊಳಿಸುತ್ತಿದ್ದೇನೆ. ▪

ವರದಿ ಮತ್ತು ಚಿತ್ರಗಳು: ಸ್ಮಿತಾ ಮೇಲ್ಕೋಟೆ

ಸಂಪಾದಕೀಯ

ಬದರಿ ತ್ಯಾಮಗೊಂಡ್ಲು

ಜೀವನ ನಡೆಯಲ್ಲಿನ ಸಹಜತೆಯು ನಮ್ಮ ನಿಜವಾದ ರೂಪವನ್ನು ಸಮಾಜಕ್ಕೆ ಪರಿಚಯಿಸುತ್ತದೆ. ಹಾಗಾದರೆ ಸಹಜವೆಂದರೆ, ಯಾವಾಗಲೂ ಸತ್ಯವನ್ನೇ ನುಡಿಯಬೇಕೆಂಬ ನುಡಿಗೆ ಕಟ್ಟು ಬೀಳಬೇಕೆ ಎಂದು ಅನ್ನಿಸಬಹುದು. ಹೌದು ಎನ್ನುವುದು ಉತ್ತರವಾದರೂ, ಕೇವಲ ಸತ್ಯ ನುಡಿಯುವುದರಿಂದ ಹಾಗಿರಲು ಆಗದೆ ಇರಬಹುದು. ಸಂದರ್ಭಕ್ಕೆ ತಕ್ಕದಾದ ವೇಷಗಳು ಬಹುತೇಕ ವೇಳೆ ಅಗತ್ಯವೂ ಆಗುತ್ತದೆ. ಅದು ತಪ್ಪೆನಿಸುವುದಿಲ್ಲ. ಆದರೆ ಕೇವಲ ಮೆಚ್ಚಿಸಲೋಸುಗ ಮಾಡುವ ಕಾರ್ಯಗಳಲ್ಲಿ ಪೊಳ್ಳುತನ ಬಹು ಬೇಗವಲ್ಲದಿದ್ದರೂ ಖಂಡಿತ ತಿಳಿದು ಬಿಡುತ್ತದೆ.

ಪ್ರಕೃತಿಯಲ್ಲಿನ ಆ ಸುಂದರ ಸಹಜತೆಯನ್ನು ತೆರೆದ ಕಣ್ಣಿದ್ದರೆ ಅದೆಷ್ಟು ಕಡೆ ನೋಡಬಹುದು. ಮೆಚ್ಚಿಸಲೇ ಬೇಕೆಂದು ಹೂವು ಅರಳುತ್ತದೆಯೇ. ಸಭಿಕರಿದ್ದಾರೆಂದೇ ಕೋಗಿಲೆಗಳು ಕುಹೂ ಕುಹೂ ಎಂದು ಮಧುರ ಕಂಠದಿಂದ ಹಾಡುತ್ತವೆಯೇ, ಪ್ರಶಸ್ತಿ ಕೊಡುತ್ತಾರೆಂದೇ ನವಿಲುಗಳು ನರ್ತಿಸುತ್ತವೆಯೇ ... ಹೀಗೆ ಅನೇಕ ದೃಷ್ಟಾಂತಗಳು ಗೋಚರವಾಗುತ್ತವೆ. ಅದೇ ರೀತಿಯ, ಫಲಾಪೇಕ್ಷೆ ಇಲ್ಲದೇ ಮಾಡುವ ನಮ್ಮೆಲ್ಲರಿಗೂ ದಕ್ಕಿರುವ ಅಮೂಲ್ಯ ಆಸ್ತಿಯೆಂದರೆ "ತಾಯಿಯ ಮಮತೆ".

ಮನುಜ ಸಂಕುಲವನ್ನು ಹಡೆದು, ಪೊರೆಯುವ ಈ ಶಕ್ತಿಗೆ "ಮಾತೃ ದೇವೋಭವ" ಎಂದು ನಮಿಸಿದರೂ, ಅವಳನ್ನು ದಿನನಿತ್ಯ ನೋಡಿದರೂ, ಹತ್ತಿರವಿದ್ದರೂ, ಅವಳಲ್ಲಿನ ಆ ಸಹಜತೆಯನ್ನು ನಾವು ಕಲಿಯುವುದಿಲ್ಲವೆಂದೆನಿಸುತ್ತದೆ. ಕಷ್ಟಗಳು ಸಾವಿರವಿದ್ದರೂ, ಅದೆಷ್ಟು ಸಹಜವಾಗಿ ಮಕ್ಕಳನ್ನು ಪೋಷಿಸಿ, ಮಮತೆಯನ್ನು ಚಿಗುರಿಸಿ ಹೆಮ್ಮರವಾಗುವಂತೆ ಪೋಷಿಸುತ್ತಾಳೆ. ಮುಖವಾಡದ ಅವಶ್ಯಕತೆ ಇಟ್ಟುಕೊಳ್ಳದೆ, ಆ ಸಂಸಾರಕ್ಕೆ ಬೆಲ್ಲದ ಪಾಯಸವನ್ನೇ ಬಡಿಸುತ್ತ, ಕಷ್ಟಗಳೆಂಬ ಬೇವನ್ನು ತಾನು ಜಿಗಿಯುತ್ತಲೇ ಇರುತ್ತಾಳೆ.

ಮಹಿಳಾ ದಿನಾಚರಣೆ ಎನ್ನುವ ಈ ಸಂದರ್ಭದಲ್ಲಿ, ಹೆಣ್ಣೆಂಬ ಆ ದೇವಿಗೆ ಯುಗ ಯುಗಗಳೇ ಬಂದರೂ, ಸಲ್ಲಿಸಬೇಕಾಗಿರುವ ಎಲ್ಲ ನಮನಗಳನ್ನು ಸಲ್ಲಿಸಿ ಯುಗಾದಿಯನ್ನು ಬರಮಾಡಿಕೊಂಡರೆ ಅದೆಂತಹ ಅದ್ಭುತ ಚೈತನ್ಯವು ನಮ್ಮಲ್ಲಿ ಚಿಗುರುತ್ತದಲ್ಲವೇ!

"ಹೊರನಾಡ ಚಿಲುಮೆ" ಇ-ಪತ್ರಿಕೆಯ ಎಲ್ಲಾ ಓದುಗರಿಗೆ, ಲೇಖಕರಿಗೆ ಯುಗಾದಿಯ ಶುಭಾಶಯಗಳನ್ನು ಕೋರುತ್ತೇವೆ. ವರ್ಷಾದಿಯಲ್ಲಿ ಪ್ರೀತಿಯೆಂಬ ಸಸಿಯು ಚಿಗುರಿ, ನಮ್ಮೆಲ್ಲರ ಸಹಜ ವ್ಯಕ್ತಿತ್ವದಿಂದ ಪೋಷಣೆ ಪಡೆದು, ಸಂತಸವೆಂಬ ಹೆಮ್ಮರವಾಗಿ ಬೆಳೆಯಲಿ. ಬಾಳಿಗೆ ತಂಪನೆರೆಯುತ್ತ ಹಸನಾಗಿರಿಸಲಿ ಎಂದು ಆಶಿಸುತ್ತೇವೆ. ▪

ಎರಡು ತಿಂಗಳ ಪ್ರಮುಖ ದಿನಗಳು

ಮಾರ್ಚ್ ಶ್ರೀ ಜಯ/ಮನ್ಮಥ ನಾಮ ಸಂವತ್ಸರ, ಉತ್ತರಾಯಣ,ಶಿಶಿರ/ವಸಂತ ಋತು, ಫಾಲ್ಗುಣ/ಚೈತ್ರ ಮಾಸ

01 ಭಾ - ಅಮಲಕೀ ಏಕಾದಶಿ 05 ಗು - ಹೋಳಿ ಹಬ್ಬ, ಹೋಳಿ ಹುಣ್ಣಿಮೆ
08 ಭಾ - ಅಂ ರಾ ಮಹಿಳಾ ದಿನ
09 ಸೋ - ಸಂಕಷ್ಟ ಚತುರ್ಥಿ 16 ಸೋ - ಪಾಪಮೋಚನಿ ಏಕಾದಶಿ
19 / 20 - ಗು/ಶು ಯುಗಾದಿ ಅಮಾವಾಸ್ಯೆ
21 ಶ - ಚಾಂದ್ರ ಮಾನ ಯುಗಾದಿ, ಚೈತ್ರ ಮಾಸ, ವಸಂತ ಋತು, ಶ್ರೀ ಮನ್ಮಥ ನಾಮ ಸಂವತ್ಸರ ಆರಂಭ
25 ಬು - ದೇವರ ದಾಸಿಮಯ್ಯ ಜಯಂತಿ
28 ಶ - ಶ್ರೀ ರಾಮ ನವಮಿ
31 - ಕಾಮದಾ ಏಕಾದಶಿ

ಏಪ್ರಿಲ್ ಶ್ರೀ ಮನ್ಮಥ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ/ವೈಶಾಖ ಮಾಸ

02 ಗು - ಮಹಾವೀರ ಜಯಂತಿ
03 ಶು - ಗುಡ್ ಫ್ರೈಡೆ, 04 ಶ - ಹೋಲಿ ಸಾಟರ್ಡೇ,
05 ಭಾ - ಈಸ್ಟರ್ ಸಂಡೇ
07 ಮಂ - ಸಂಕಷ್ಟ ಚತುರ್ಥಿ
14 ಮಂ - ಸೌರ ಯುಗಾದಿ, ಡಾ ಅಂಬೇಡ್ಕರ್ ಜಯಂತಿ
15 ಬು - ವರೂಥಿನಿ ಏಕಾದಶಿ, 18 ಶ - ಅಕ್ಷಯತದಿಗೆ ಅಮಾವಾಸ್ಯೆ
19 ಭಾ - ವೈಷಾಖ ಮಾಸ ಆರಂಭ
21 ಮಂ - ಅಕ್ಷಯ ತದಿಗೆ, ಬಸವ ಜಯಂತಿ, 23 ಗು - ಶಂಕರ ಜಯಂತಿ
24 ಶು - ರಾಮಾನುಜಾಚಾರ್ಯರ ಜಯಂತಿ
29 ಬು - ಮೋಹಿನೀ ಏಕಾದಶಿ

ಸಿಡ್ನಿಯಲ್ಲಿ ಮಧ್ವ ನವಮಿಯ ಆಚರಣೆ – ವರದಿ

ಪ್ರತಿ ವರ್ಷದಂತೆ ಈ ವರುಷವು ಸಹ ಮಾಘ ಮಾಸ ಬಹುಳ ತೃತೀಯ ದಿನದಂದು ಅಂದರೆ ಶನಿವಾರ ಫೆಬ್ರವರಿ ೭ನೆಯ ದಿನಾಕ ಶ್ರೀ ರಾಘವೇಂದ್ರ ಭಕ್ತ ಮಂಡಳಿ ಸದಸ್ಯರು ಮತ್ತು ಭಕ್ತರು ಒಡಗೂಡಿ ಆಚರಿಸಿದರು. ಪಿಂಗಳ ನಾಮ ಸಂವತ್ಸರ, ೧೩೧೭ ಇಸವಿ ಮಾಘ ಶುಕ್ಲ ನವಮಿಯ ದಿನ ಶ್ರೀ ಮಧ್ವಾಚಾರ್ಯರು ಉಡುಪಿಯಲ್ಲಿ ಶಿಷ್ಯರಿಗೆ ಪಾಠ ಹೇಳುತ್ತಿರುವಾಗ ಹೂವಿನ ಮಳೆಯಾಗಿ ಆಚಾರ್ಯರು ಶ್ರೀ ವೇದವ್ಯಾಸರ ಬಳಿ ಇರಲು ಬದರಿಕಾಶ್ರಮಕ್ಕೆ ಅದೃಶ್ಯರಾದರು. ಈ ದಿನವನ್ನು ಕಳೆದ ೭೦೦ ವರುಷಗಳಿಂದ ಶ್ರೀ ಮಧ್ವ ನವಮಿ ಎಂದು ಮಧ್ವ ಜನಾಂಗ ಆಚರಿಸುತ್ತಿದ್ದಾರೆ.

ಶ್ರೀ ರಾಘವೇಂದ್ರ ಭಕ್ತ ಮಂಡಳಿ ಸಿಡ್ನಿ ನಗರದಲ್ಲಿರುವ ಆಬರ್ನ್‌ನಲ್ಲಿ ಇರುವ ಶ್ರೀ ಮಂದಿರದಲ್ಲಿ ಈ ಮಹೋತ್ಸವವನ್ನು ಅಂದು ಬೆಳಿಗ್ಗೆ ದೇವರ ಮಂಟಪವನ್ನು ನಿರ್ಮಿಸಿ ಶ್ರೀ ಕೃಷ್ಣ ದೇವರು, ಶ್ರೀ ಆಂಜನೆಯ ಸ್ವಾಮಿ, ಭೀಮಸೇನ ದೇವರ ಅವತಾರಿಯಾದ ಶ್ರೀಮಧ್ವಾಚಾರ್ಯರಿಗೆ ಷೋಡಶ ಉಪಚಾರ ಪೂಜೆ ಸಲ್ಲಿಸಿದರು. ಪೂಜೆ ಸಂಕಲ್ಪದಿಂದ ಆರಂಭಗೊಂಡು ಅಭಿಷೇಕ, ಅರ್ಚನೆ, ಅಷ್ಟೋತ್ತರ, ನೈವೇದ್ಯ ಸಮರ್ಪಣೆ ಮತ್ತು ಮಹಾಮಂಗಳಾರತಿಗಳಿಂದ ಓಡಗೂಡಿತ್ತು. ಭಕ್ತರು ಸಹ ಜೊತೆಯಲ್ಲಿ ಶ್ರೀ ಹರಿ ವಾಯುಸ್ತುತಿ, ಶ್ರೀ ಸುಮಧ್ವ ವಿಜಯ, ಕೆಲವು ದ್ವಾದಶ ಸ್ತೋತ್ರಗಳು, ಮಧ್ವನಾಮ ಶ್ರೀ ರಾಘವೇಂದ್ರ ಸ್ವಾಮಿಗಳ ಸ್ತೋತ್ರಗಳನ್ನು ಪಾರಾಯಣ ಮಾಡಿದರು. ಕೆಲವು ಭಕ್ತರು ದೇವರನಾಮಗಳನ್ನು ಭಕ್ತಿ ಪರವಶದಿಂದ ಹಾಡಿದರು. ನೂರಕ್ಕೂ ಹೆಚ್ಚು ಜನರು ಈ ಮಹೋತ್ಸವದಲ್ಲಿ ಪಾಲ್ಗೊಂಡು ದೇವರ ಅನುಗ್ರಹಕ್ಕೆ ಪಾತ್ರರಾದರು. ಭಕ್ತರು ಪ್ರೀತಿಯಿಂದ ತಯಾರಿಸಿದ ಶ್ರೀ ಹಯಗ್ರೀವ, ಪಾಯಸ ಒಳಗೊಂಡ ಮತ್ತು ನಿವೇದಿಸಿದ ಪ್ರಸಾದ, ತೀರ್ಥ, ಪಂಚಾಮೃತ ಮತ್ತು ಮಹಾಪ್ರಸಾದ ವಿನಿಯೋಗದಿಂದ ಮಧ್ಯಾನ್ಹ ಮಹೋತ್ಸವವು ಮುಕ್ತಾಯಗೊಂಡಿತು ಎಂದು ತಿಳಿಸಲು ಹರ್ಷಿಸುತ್ತೇವೆ. ▪

ವರದಿ ಮತ್ತು ಚಿತ್ರಗಳು: ಶ್ರೀಧರ್ ಕುಂಸಿ / ಸುಧೀಂದ್ರ ರಾವ್



ಪುಸ್ತಕ ಬಿಡುಗಡೆ

ಬೇಲೂರು ರಾಮಮೂರ್ತಿಯವರ ಕಥಾ ಪ್ರಪಂಚ ಹಾಗೂ ನಗೆ ಮತ್ತು ಹೂ ನಗೆ ಪುಸ್ತಕ ಬಿಡುಗಡೆ ಸಮಾರಂಭ

ಕರ್ನಾಟಕದ ಜನಪ್ರಿಯ ಹಾಸ್ಯ ಬರಹಗಾರ ಶ್ರೀ ಬೇಲೂರು ರಾಮಮೂರ್ತಿಯವರ "ಕಥಾ ಸಂಚಯ" ಮತ್ತು "ನಗೆ ಮತ್ತು ಹೂ ನಗೆ" ಪುಸ್ತಕಗಳನ್ನು ಬೆಂಗಳೂರಿನ ಸುರಾನಾ ಕಾಲೇಜಿನಲ್ಲಿ ಭಾನುವಾರ 15.2.2015 ರಂದು ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಅಧ್ಯಕ್ಷರಾದ ಶ್ರೀ ವೈ. ಕೆ ಮುದ್ದುಕೃಷ್ಣ ಅವರು ಬಿಡುಗಡೆ ಮಾಡಿದರು. ಅವರು ಮಾತನಾಡುತ್ತಾ ಬೇಲೂರು ರಾಮಮುರ್ತಿಯವರ ಸಾಹಿತ್ಯ ರಂಗದ ಹೆಜ್ಜೆಗಳನ್ನು ಗುರುತಿಸಿ ತಾವಿಬ್ಬರೂ ಕೂಡಾ ಹಾಸನ ಜಿಲ್ಲೆಯವರೇ ಎನ್ನುವುದು ಒಂದು ಹೆಮ್ಮೆಯ ಸಂಗತಿ ಎಂದರು. ಸದಭಿರುಚಿಯ ಲೇಖಕರೆಂದು ಹೆಸರು ಗಳಿಸಿರುವ ಲೇಖಕರು ತಮ್ಮನ್ನು ತಾವು ವಿವಿಧ ರಂಗಗಳಲ್ಲಿ ತೊಡಗಿಸಿಕೊಂಡಿರುವುದರ ಕುರಿತು ಮತ್ತು ಅವರು ನಡೆಸಿಕೊಂಡು ಬರುತ್ತಿರುವ ಹಾಸ್ಯೋತ್ಸವದ ಬಗೆಗೆ ಅಭಿಮಾನ ಪೂರ್ವಕವಾಗಿ ಮಾತಾಡಿದರು. ಇಂದು ವಿಶ್ವದಾದ್ಯಂತ ನಡೆಯುತ್ತಿರುವ ಹಾಸ್ಯ ಸಮಾರಂಭಗಳಿಗೆ ಪ್ರಮುಖ ತಳಹದಿಯೇ ಬೆಂಗಳೂರಿನಲ್ಲಿ ಪ್ರತಿವರ್ಷ ಡಿಸೆಂಬರ್ 25 ರಂದು ನಡೆಯುತ್ತಿರುವ ಹಾಸ್ಯೋತ್ಸವ ಎಂದರು

ಕಥಾಸಂಚಯದ ಬಗೆಗೆ ಕರ್ನಾಟಕದ ಸುಪ್ರಸಿದ್ಧ ಕಥೆಗಾರರಾದ ಶ್ರೀ ಈಶ್ವರಚಂದ್ರ ಅವರು ಈ ಹಿಂದೆ ಅವರು ಬೇಲೂರು ರಾಮಮೂರ್ತಿಯವರ ಅಭಿಜ್ಞಾನ ಕಾದಂಬರಿಯನ್ನು ಬಿಡುಗಡೆ ಮಾಡಿ ಮಾತಾಡಿದ್ದನ್ನು ನೆನಪಿಸಿಕೊಂಡರು. ಕಥಾ ಪ್ರಪಂಚದ ಎಲ್ಲ ಕಥೆಗಳ ಬಗೆಗೆ ಸೂಕ್ಷ್ಮವಾಗಿ ವಿಮರ್ಶೆ ಮಾಡಿದ ಶ್ರೀ ಈಶ್ವರಚಂದ್ರ ಕಥೆಗಳ ಒಳನೋಟ ಮತ್ತು ಆಶಯ ಇವುಗಳನ್ನು ಬಿಚ್ಚಿಟ್ಟರು. ಪ್ರಸ್ತುತ ಬಿಡುಗಡೆಯಾಗುತ್ತಿರುವ ಕಥಾ ಪ್ರಪಂಚ ಹಾಗೂ ನಗೆ ಮತ್ತು ಹೂನಗೆ ಪುಸ್ತಕಗಳು ಅವರ 97 ಮತ್ತು 98ನೇ ಕೃತಿಯಾಗಿದ್ದು ಶೀಘ್ರದಲ್ಲೇ ಬೇಲೂರು ರಾಮಮೂರ್ತಿಯವರ ನೂರನೆಯ ಪುಸ್ತಕವೂ ಬಿಡುಗಡೆಯಾಗಲಿ ನಾವೆಲ್ಲ ಆ ಸಂತೋಷದ ಸಮಾರಂಭದಲ್ಲಿ ಭಾಗವಹಿಸೋಣ ಎಂದು ಆಶಿಸಿದರು

ಬೇಲೂರು ರಾಮಮೂರ್ತಿಯವರ ಇನ್ನೊಂದು ಪುಸ್ತಕ ನಗೆ ಮತು ಹೂನಗೆ ಕುರಿತು ಮಾತನಾಡಿದ ಹಾಸ್ಯ ಬರಹಗಾರ ಶ್ರೀ ಎಂ.ಎಸ್. ನರಸಿಂಹಮೂರ್ತಿಯವರು ಗೊರೂರು ರಾಮಸ್ವಾಮಿ ಅಯ್ಯಂಗಾರರೂ ಬೇಲೂರರೂ ಇಬ್ಬರೂ ಹಾಸನ ಜಿಲ್ಲೆಯವರು ಅವರು ಅಮೆರಿಕ ಪ್ರವಾಸ ಮಾಡಿ ಅಮೆರಿಕದಲ್ಲಿ ಗೊರೂರು ಬರೆದರೆ ಬೇಲೂರು ರಾಮಮೂರ್ತಿಯವರು ಜಪಾನ್ ಪ್ರವಾಸ ಮಾಡಿ ಜಪಾನಿನಲ್ಲಿ ಬೇಲೂರು ಕೃತಿ ಬರೆದರು ಎಂದು ನೆನಪಿಸಿಕೊಂಡರು. ನಗೆ ಮತ್ತು ಹೂ ನಗೆ ಪುಸ್ತಕದಲ್ಲಿನ ಹಲವು ಲೇಖನಗಳ ಬಗೆಗೆ ವಿಶೇಷವಾಗಿ " ಅಮ್ಮ ಎಂದರೆ " ಪ್ರಬಂಧದ ಬಗೆಗೆ ಅವರು ಮೆಚ್ಚುಗೆ ಸೂಚಿಸಿದರು.

ಲೇಖಕ ಬೇಲೂರು ರಾಮಮೂರ್ತಿಯವರು ಇಂಥ ಸಮಾರಂಬಗಳಲ್ಲಿ ತಾವು ಮಾತನಾಡುವುದು ಏನೂ ಇಲ್ಲವೆಂದರೂ ತಮ್ಮ ಸಾಹಿತ್ಯ ಕೃಷಿಯಲ್ಲಿ ಸಹಕಾರ ನೀಡುತ್ತಿರುವ ಹೇಮಂತ ಸಾಹಿತ್ಯವನ್ನು ಗೆಳೆಯರನ್ನೂ, ತಮ್ಮ ಲೇಖನಗಳನ್ನು ಪ್ರಕಟಿಸುತ್ತಾ ಬಂದಿರುವ ಪತ್ರಿಕಾ ಸಮೂಹವನ್ನು ಕೃತಜ್ಞತೆಯಿಂದ ನೆನಪಿಸಿಕೊಂಡರು. ಈಶ್ವರ ಚಂದ್ರ ಮತ್ತು ಎಂ.ಎಸ್. ನರಸಿಂಹಮೂರ್ತಿಯವರು ತಮ್ಮ ಸಮಕಾಲೀನ ಗೆಳೆಯರು ಹಾಗೂ ಒಬ್ಬರು ಇನ್ನೊಬ್ಬರ ಸಾಧನೆಯನ್ನು ಗುರುತಿಸಿ ಗೌರವಿಸಿಕೊಂಡು ಬರುತ್ತಿದ್ದೇವೆ ಎಂದರು.

ಅದ್ಯಕ್ಷತೆ ವಹಿಸಿದ್ದ ಸುರಾನಾ ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಎಸ್ ಶ್ರೀಕಂಠ ಅವರು ಈ ಹಿಂದೆ ಸುರಾನಾ ಕಾಲೇಜಿನಲ್ಲಿ ಬೇಲೂರು ರಾಮಮೂರ್ತಿಯವರ ಎರಡು ಪುಸ್ತಕಗಳಾದ ಹಾಸ್ಯ ರತ್ನಗಳು ಮತ್ತು ನಾಲ್ಕು ನಗೆ ನಾಟಕಗಳು ಕೃತಿಗಳ ಬಗೆಗೆ ನೆನಪು ಮಾಡಿಕೊಂಡು ಸುರಾನಾ ಕಾಲೇಜು ಸದಾ ಸಾಹಿತ್ಯಿಕ ಚಟುವಟಿಕೆಗಳಿಗೆ ಉತ್ತೇಜನ ಕೊಡತ್ತದೆ ಎಂದರು.

ಸಮಾರಂಭದಲ್ಲಿ ವಿಶೇಷವಾಗಿ ಆಸ್ಟ್ರೇಲಿಯಾದಿಂದ ಶ್ರೀ ಕನಕಪುರ ನಾರಾಯಣ್ ಅವರು ಆಗಮಿಸಿದ್ದರು. ಸುಗಮ ಕನ್ನಡ ಪತ್ರಿಕೆಯ ಮುಖಾಂತರ ವಿಶ್ವಾದ್ಯಂತ ಕನ್ನಡ ಫಮವನ್ನು ಪಸರಿಸುತ್ತಿರುವ ಅವರು ಬೆಂಗಳೂರಿಗೆ ಭೇಟಿಕೊಡುವ ದಿನಕ್ಕೆ ಈ ಸಮಾರಂಭ ಆಯೋಜನೆಯಾಗಿದ್ದು ಒಂದು ಶೇಷವಾಗಿತ್ತು. ಬೇಲೂರು ರಾಮಮೂರ್ತಿಯವರನ್ನು ಅಭಿನಂದಿಸಿದ ಶ್ರೀ ಕನಕಪುರ ನಾರಾಯಣ್ ಅವರು ಸುಗಮ ಕನ್ನಡ ಪತ್ರಿಕೆಗೆ ಬರೆಯುವಂತೆ ನೆರೆದಿದ್ದ ಬಂಧುಗಳಿಗೆ ಆಹ್ವಾನ ಕೊಟ್ಟರು.

ಹೇಮಂತ ಸಾಹಿತ್ಯದ ಶ್ರೀ ಎಂ. ವೆಂಕಟೇಶ್, ಶ್ರೀ ವಿ. ಹೇಮಂತ ಮತ್ತು ಸುರಾನಾ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥೆ ಡಾ. ವತ್ಸಲ ಮೋಹನ್ ಮತ್ತು ಅನೇಕ ಸಾಹಿತ್ಯಾಸಕ್ತರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ▪

ರಾಜಿ ಜಯದೇವ್ (Accredited Practising Dietician)
Mrs Raji Jayadev, B.Sc (Hons) Dip Nutr & Diet (Syd)

ಆಲಿವ್ ಮರದ ವೈಜ್ಞಾನಿಕ ಹೆಸರು ಓಲಿಯ ಯೂರೋಪಿಯ (Olea europaea), ಓಲಿಯೇಸಿ (Oleaceae) ಕುಟುಂಬಕ್ಕೆ ಸೇರಿದ್ದು. ಆಲಿವ್ ಹಣ್ಣಿನಿಂದ ತೆಗೆಯಲ್ಪಡುವ ಈ ಎಣ್ಣೆಯನ್ನು ಹಲವಾರು ದೇಶಗಳಲ್ಲಿ ಉಪಯೋಗಿಸುತ್ತಾರೆ. ಆದರೆ ಮೆಡಿಟರೇನಿಯನ್ ಸಮುದ್ರದ ಬಳಿಯಿರುವ ದೇಶಗಳಲ್ಲಿ ಇದರ ಉಪಯೋಗ ಬಲು ಹೆಚ್ಚು. ಆಹಾರಪದಾರ್ಥಗಳು, ಔಷಧಿಗಳು, ಸೌಂದರ್ಯ ಪ್ರಸಾಧನ ವಸ್ತುಗಳು, ಸಾಬೂನು ಇವುಗಳ ತಯಾರಿಕೆಯಲ್ಲಿ ಆಲಿವ್ ಎಣ್ಣೆಯನ್ನು ಉಪಯೋಗಿಸುತ್ತಾರೆ.

ಆಲಿವ್ ಹಣ್ಣು, ಅತ್ಯಂತ ಪ್ರಾಚೀನ ಆಹಾರಪದಾರ್ಥಗಳಲ್ಲಿ ಒಂದು. ಕ್ರಿಸ್ತಪೂರ್ವ 3000 ಇಸವಿಯಲ್ಲೇ ಆಲಿವ್ ಎಣ್ಣೆಯನ್ನು ಆಹಾರಪದಾರ್ಥ ಮತ್ತು ಔಷಧಿಗಳ ತಯಾರಿಕೆಗೆ ಉಪಯೋಗಿಸುತ್ತಿದ್ದರೆಂದು ತಿಳಿದುಬಂದಿದೆ. ಗ್ರೀಸ್ ದೇಶದ ಸಂಸ್ಕೃತಿಯಲ್ಲಿ ಆಲಿವ್ ಟೊಂಗೆ ಶಾಂತಿ ಮತ್ತು ಜ್ಞಾನದ ಚಿಹ್ನೆ.

ಆಲಿವ್ ಎಣ್ಣೆಯನ್ನು ಉತ್ಪಾದಿಸುವಲ್ಲಿ ಸ್ಪೇನ್ ದೇಶ ಮೊದಲನೆಯ ಸ್ಥಾನ (43.8%), ಇಟಲಿ ಎರಡನೆಯ ಸ್ಥಾನ (21.5%), ಗ್ರೀಸ್ ಮೂರನೆಯ ಸ್ಥಾನ (೧೨.೧%) ಗಳಿಸಿವೆ. ಈಗ ಆಸ್ಟ್ರೇಲಿಯಾದಲ್ಲೂ ಆಲಿವ್ ಎಣ್ಣೆಯನ್ನು ಉತ್ಪಾದಿಸುತ್ತಾರೆ ಮತ್ತು ಹಲವಾರು ದೇಶಗಳಿಗೆ ರಫ್ತುಮಾಡುತ್ತಾರೆ. ಇತರ ದೇಶದ ಜನರಿಗೆ ಹೋಲಿಸಿದರೆ ಗ್ರೀಕರು ಅತಿ ಹೆಚ್ಚು (ಒಂದು ವರ್ಷಕ್ಕೆ ಒಬ್ಬ ವ್ಯಕ್ತಿ (26 ಲೀಟರ್) ಆಲಿವ್ ಎಣ್ಣೆಯನ್ನು ಉಪಯೋಗಿಸುತ್ತಾರೆ).

ಆಲಿವ್ ಎಣ್ಣೆಯ ಜನಪ್ರಿಯತೆಗೆ ಮುಖ್ಯ ಕಾರಣ ಆಲಿವ್ ಎಣ್ಣೆಯನ್ನು ಯಥೇಚ್ಛವಾಗಿ ಉಪಯೋಗಿಸುವ ಮೆಡಿಟರೇನಿಯನ್ ಆಹಾರಕ್ರಮ. ಮೆಡಿಟರೇನಿಯನ್ ದೇಶಗಳು ಯಾವುವೆಂದರೆ - ದಕ್ಷಿಣ ಇಟಲಿ, ಗ್ರೀಸ್, ಸ್ಪೇನ್, ಪೋರ್ಚುಗಲ್, ದಕ್ಷಿಣ ಫ್ರಾನ್ಸ್, ಮೊರಾಕೊ ಮತ್ತು ಟರ್ಕಿ. ಈ ದೇಶದ ಜನರು ಉತ್ತಮ ಆರೋಗ್ಯ ಹೊಂದಿರುತ್ತಾರೆ ಮತ್ತು ದೀರ್ಘಾಯುಷಿಗಳಾಗಿರುತ್ತಾರೆ. ಮೆಡಿಟರೇನಿಯನ್ ಆಹಾರಕ್ರಮ ಆರೋಗ್ಯದಾಯಕ, ಡಯಾಬಿಟಿಸ್, ಹೃದಯರೋಗಗಳು, ಕ್ಯಾನ್ಸರ್ ಮುಂತಾದ ಖಾಯಿಲೆಗಳನ್ನು ತಡೆಹಿಡಿಯುತ್ತದೆ ಎಂದು ಹಲವಾರು ಸಂಶೋಧನೆಗಳು ಮತ್ತು ಅಧ್ಯಯನಗಳಿಂದ ಸಾಬೀತಾಗಿದೆ.

ಮೆಡಿಟರೇನಿಯನ್ ಆಹಾರಪದ್ಧತಿ/ಪಥ್ಯಪದ್ಧತಿ (ಡಯಟ್) ಎಂದರೇನು?

ಇದು ಮೆಡಿಟರೇನಿಯನ್ ದೇಶಗಳಲ್ಲಿ ಪಾಲಿಸುವ ಸಾಂಪ್ರದಾಯಿಕ ಆಹಾರಪದ್ಧತಿ. ಪ್ರತಿದಿನ ಬಗೆಬಗೆಯ ತರಕಾರಿಗಳು, ಹಣ್ಣುಗಳು, ಟೊಮೇಟೊ, ಬೆಳ್ಳುಳ್ಳಿ, ತಾಜಾ ಗಿಡಮೂಲಿಕೆಗಳು (ಹರ್ಬ್ಸ್), ಬೇಳೆ ಮತ್ತು ಕಾಳುಗಳು, ಧಾನ್ಯಗಳು, ಆಲಿವ್ ಎಣ್ಣೆ, ಮೊಸರು, ಕೊಬ್ಬಿನ ಬೀಜಗಳು, ಮೀನು ಮತ್ತು ಕೆಂಪು ವೈನ್ ಇವುಗಳನ್ನು ಸೇವಿಸುತ್ತಾರೆ. ಈ ಆಹಾರಗಳಲ್ಲಿ ದೇಹರಕ್ಷಕ ಆಂಟಿ-ಆಕ್ಸಿಡೆಂಟ್ಸ್ (anti-oxidants), ಒಮೇಗಾ 3 ಕೊಬ್ಬು (omega 3 fat), ನಾರು (fibre) ಮತ್ತು ಒಳ್ಳೆಯ ಕೊಬ್ಬು (good fats) ಹೇರಳವಾಗಿವೆ. ಡಯಾಬಿಟಿಸ್, ಹೃದಯರೋಗಗಳು, ಕ್ಯಾನ್ಸರ್ ಮುಂತಾದ ಖಾಯಿಲೆಗಳನ್ನು ತಡೆಹಿಡಿಯಲು ಮೇಲೆ ಹೇಳಿದ ಎಲ್ಲಾ ಆಹಾರ ಪದಾರ್ಥಗಳೂ ಬೇಕು. ಮಾಂಸ, ಹಾಲು, ಬೆಣ್ಣೆ, ಸಿಹಿತಿಂಡಿಗಳು ಮತ್ತು ಸಂಸ್ಕರಿಸಿದ ಆಹಾರಪದಾರ್ಥಗಳನ್ನು ಅತಿ ಕಡಿಮೆ ಉಪಯೋಗಿಸುತ್ತಾರೆ. ಈ ಪಥ್ಯಪದ್ಧತಿಯ ವಿಶೇಷತೆ ಏನೆಂದರೆ ಇದರಲ್ಲಿ ಮಾನೋ ಅನ್-ಸ್ಯಾಚುರೇಟೆಡ್ ಕೊಬ್ಬು (ಒಳ್ಳೆಯ ಕೊಬ್ಬು) ಅತಿ ಹೆಚ್ಚು ಮತ್ತು ಸಾಂದ್ರೀಕೃತ ಕೊಬ್ಬು (ಕೆಟ್ಟ ಕೊಬ್ಬು) ಅತ್ಯಂತ ಕಡಿಮೆ ಇರುವುದು. ದೈಹಿಕ ದುಡಿತ ಮತ್ತು ಕ್ರಿಯಾಶೀಲತೆ ಇವರ ಜೀವನಕ್ರಮದಲ್ಲಿ ಹಾಸುಹೊಕ್ಕಾಗಿದೆ.

ಗಮನಿಸಿ: ಈ ಆರೋಗ್ಯದಾಯಕ ಪಥ್ಯಪದ್ಧತಿಯಲ್ಲಿ ಆಲಿವ್ ಎಣ್ಣೆ ಒಂದು ಚಿಕ್ಕ ಭಾಗ ಮಾತ್ರ.

ಪೋಷಕಾಂಶಗಳು

ಇತರ ಎಣ್ಣೆಗಳಿಗೆ ಹೋಲಿಸಿದರೆ ಆಲಿವ್ ಎಣ್ಣೆಯಲ್ಲಿ ಮಾನೋ ಅನ್-ಸ್ಯಾಚುರೇಟೆಡ್ (mono-unsaturated) ಕೊಬ್ಬು ಅತಿ ಹೆಚ್ಚು (70%) ಇರುತ್ತದೆ. ಅಲ್ಲದೆ ವಿಟಮಿನ್ 'ಇ', ವಿಟಮಿನ್ 'ಕೆ' ಗಣನೀಯ ಪ್ರಮಾಣದಲ್ಲಿವೆ. ಮುವ್ವತ್ತಕ್ಕೂ ಹೆಚ್ಚು ಪಾಲಿಫೀನಾಲ್ಸ್ ಗುಂಪಿಗೆ ಸೇರಿದ ದೇಹರಕ್ಷಕ ಆಂಟಿ-ಆಕ್ಸಿಡೆಂಟ್ಸ್ (anti-oxidants) ಗಳಿವೆ. ಆಲಿವ್ ಎಣ್ಣೆಗೆ ಹೋಲಿಸಿದರೆ 100 ಪಟ್ಟಿನವರೆಗೂ ಹೆಚ್ಚು ಪಾಲಿಫೀನಾಲ್ಸ್ ಗಳು ಆಲಿವ್ ಹಣ್ಣಿನಲ್ಲಿವೆ. ಮೆಡಿಟರೇನಿಯನ್ ದೇಶಗಳಲ್ಲಿ ವಾಸಿಸುವವರು ಪ್ರತಿದಿನ ಆಲಿವ್ ಹಣ್ಣನ್ನು ತಿನ್ನುತ್ತಾರೆಂದು ಇಲ್ಲಿ ಗಮನಿಸಬೇಕು.

ಮುಂದಿನ ಪುಟ ನೋಡಿ ...

ಆರೋಗ್ಯದಾಯಕ ಮತ್ತು ಆರೋಗ್ಯಪೂರಕ ಗುಣಗಳು

ಆಲಿವ್ ಎಣ್ಣೆಯ ಮಹತ್ವದ ಬಗ್ಗೆ ನಡೆದಿರುವ ಮತ್ತು ನಡೆಯುತ್ತಿರುವ ಸಂಶೋಧನೆಗಳಿಂದ ಮತ್ತು ಅಧ್ಯಯನಗಳಿಂದ ವೈದ್ಯಕೀಯ ನಿಯತಕಾಲಿಕಗಳ ಪುಟಗಳು ತುಂಬಿಹೋಗಿವೆ. ಆಲಿವ್ ಎಣ್ಣೆ ಬಳಸುವುದರಿಂದ -

1. ರಕ್ತದಲ್ಲಿನ ಕೊಲೆಸ್ಟಿರಾಲ್ ಮತ್ತು ಟ್ರೈಗ್ಲಿಸರೈಡ್ಸ್ (triglycerides, ಒಂದು ಬಗೆಯ ಕೊಬ್ಬು) ಪ್ರಮಾಣವನ್ನು ನಿಯಂತ್ರಣದಲ್ಲಿಡಬಹುದು ಅಥವಾ ತಗ್ಗಿಸಬಹುದು.
2. ಒಳ್ಳೆಯ ಕೊಲೆಸ್ಟಿರಾಲನ್ನು (HDL) ಹೆಚ್ಚಿಸಬಹುದು. ಕೆಟ್ಟ ಕೊಲೆಸ್ಟಿರಾಲನ್ನು (LDL) ತಗ್ಗಿಸಬಹುದು.
3. ರಕ್ತನಾಳಗಳ ಉರಿಯೂತ (inflammation), ಹೃದಯಾಘಾತ, ಪಾರ್ಶ್ವವಾಯು (ಲಕ್ವ) ಮುಂತಾದ ರೋಗಗಳನ್ನು ತಡೆಹಿಡಿಯಬಹುದು.
4. ಕೆಲವು ಬಗೆಯ ಕ್ಯಾನ್ಸರ್ ಗಳನ್ನು ತಡೆಯಬಹುದು.

ಯಾವ ಬಗೆಯ ಆಲಿವ್ ಎಣ್ಣೆ?

ಆಲಿವ್ ಎಣ್ಣೆಯನ್ನು ಕೊಳ್ಳಲು ಸೂಪರ್ ಮಾರ್ಕೆಟ್ ಗೆ ಹೋದರೆ ಅಲ್ಲಿರುವ ಹತ್ತಾರು ಬಗೆಯ ಆಲಿವ್ ಎಣ್ಣೆಯನ್ನು ಕಂಡು ನೀವು ಗೊಂದಲಕ್ಕೊಳಗಾಗಬಹುದು. ಪ್ಯೂರ್ ಆಲಿವ್ ಎಣ್ಣೆ (pure olive oil) ಅಥವಾ ಲೈಟ್ ಆಲಿವ್ ಎಣ್ಣೆ (light olive oil) ನಿಮ್ಮ ಕಣ್ಣು ಸೆಳೆಯಬಹುದು. ಕಾರಣ: ಪ್ಯೂರ್ ಅಂದರೆ ತಾಜಾ, ಲೈಟ್ ಅಂದರೆ ಕಡಿಮೆ ಕ್ಯಾಲೊರಿಯುಳ್ಳದ್ದು ಎಂದು ಅರ್ಥ ಮಾಡಿಕೊಂಡಿರುತ್ತೀರಿ. ನಿಮ್ಮ ನಂಬಿಕೆ ಸರಿಯೇ? ಈಗ ನೋಡೋಣ.

ಮುಖ್ಯವಾಗಿ ಎರಡು ಬಗೆಯ ಆಲಿವ್ ಎಣ್ಣೆಗಳಿವೆ.

ಸಂಸ್ಕರಿಸದ (unrefined) ಆಲಿವ್ ಎಣ್ಣೆ, ಇದರಲ್ಲಿ ಎರಡು ವಿಧ.

1. ಎಕ್ಸ್ಟ್ರಾ ವರ್ಜಿನ್ ಆಲಿವ್ ಎಣ್ಣೆ (extra virgin olive oil) - ಉತ್ತಮ ದರ್ಜೆಯ ಹಣ್ಣನ್ನು ಒಂದೇ ಒಂದು ಸಲ ಹಿಂಡಿ (first press) ತೆಗೆದ ಎಣ್ಣೆ. ಎಣ್ಣೆ ತೆಗೆಯಲು ರಾಸಾಯನಿಕಗಳನ್ನೂ ಮತ್ತು ಶಾಖವನ್ನೂ ಬಳಸುವುದಿಲ್ಲ. ಚಳಿಗಾಲದಲ್ಲಿ ಎಣ್ಣೆ ತೆಗೆಯುವುದಾದರೆ ಮಾತ್ರ ಸ್ವಲ್ಪ ಶಾಖವನ್ನು ಉಪಯೋಗಿಸುತ್ತಾರೆ.

2. ವರ್ಜಿನ್ ಆಲಿವ್ ಎಣ್ಣೆ (virgin olive oil) ತೆಗೆಯಲು ಎರಡನೇ ದರ್ಜೆಯ ಹಣ್ಣನ್ನು ಉಪಯೋಗಿಸಬಹುದು ಅಥವಾ ಹಣ್ಣನ್ನು ಎರಡನೇ ಸಲ ಹಿಸುಕಿ ಎಣ್ಣೆ ತೆಗೆಯಬಹುದು. ರಾಸಾಯನಿಕಗಳನ್ನು ಬಳಸುವುದಿಲ್ಲ. ಸ್ವಲ್ಪ ಶಾಖವನ್ನು ಉಪಯೋಗಿಸುತ್ತಾರೆ.

ಸಂಸ್ಕರಿಸಿದ ಆಲಿವ್ ಎಣ್ಣೆ (refined olive oil) – ಕೆಳದರ್ಜೆಯ ಹಣ್ಣಿನಿಂದ ರಾಸಾಯನಿಕಗಳನ್ನೂ, ಶಾಖವನ್ನೂ ಉಪಯೋಗಿಸಿ ತೆಗೆದ ಎಣ್ಣೆ. ಹಲವಾರು ಪೋಷಕಾಂಶಗಳು ನಾಶವಾಗಿರುತ್ತವೆ. ಇದರಲ್ಲಿ ಮೂರು ವಿಧ.

1. ಆಲಿವ್ ಎಣ್ಣೆ (olive oil) ಮತ್ತು ಪ್ಯೂರ್ ಆಲಿವ್ ಎಣ್ಣೆ (pure olive oil)
2. ಲೈಟ್ (light) ಮತ್ತು ಎಕ್ಸ್ಟ್ರಾ ಲೈಟ್ (extra light) ಆಲಿವ್ ಎಣ್ಣೆ
3. ಆಲಿವ್ ಪೋಮೇಸ್ ಎಣ್ಣೆ (olive pomace oil)

ನೀವು ಆಲಿವ್ ಎಣ್ಣೆಯನ್ನು ಉಪಯೋಗಿಸಬೇಕೆಂದು ನಿರ್ಧರಿಸಿದ್ದಲ್ಲಿ ಎಕ್ಸ್ಟ್ರಾ ವರ್ಜಿನ್ ಆಲಿವ್ ಎಣ್ಣೆಯೇ ಅತ್ಯುತ್ತಮ ಆಯ್ಕೆ. ಇದು ತಾಜಾ ಹಣ್ಣಿನ ರಸದಂತೆ. ಆಲಿವ್ ಹಣ್ಣಿನಲ್ಲಿರುವ ಪೋಷಕಾಂಶಗಳನ್ನು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಹೊಂದಿದೆ. ಫ್ಲೇವೊನಾಯಡ್ಸ್ ಮತ್ತು (ಅಗಸೆ ಬೀಜದಲ್ಲಿರುವ) ಲಿಗ್ನನ್ ಎಂಬ ಪಾಲಿಫೀನಾಲ್ಸ್ ಗಳು (ಆಂಟಿ-ಆಕ್ಸಿಡೆಂಟ್ಸ್) ಇರುವುದು ಎಕ್ಸ್ಟ್ರಾ ವರ್ಜಿನ್ ಆಲಿವ್ ಎಣ್ಣೆಯಲ್ಲಿ ಮಾತ್ರ. ಎಣ್ಣೆ ತಯಾರಿಸಿದ ಒಂದು ವರ್ಷದೊಳಗೆ ಸೇವಿಸುವುದು ಉತ್ತಮ. ಶೀಸೆಯ ಮೇಲೆ ತಯಾರಿಸಿದ ತಾರೀಕನ್ನು ನಮೂದಿಸಿರುತ್ತಾರೆ. ಆಸ್ಟ್ರೇಲಿಯಾದಲ್ಲಿ ಉತ್ಪಾದಿಸಿದ ಎಣ್ಣೆ ಹೊಸತಾಗಿರುವುದು ಸಹಜ. ಏಕೆಂದರೆ ಅವು ಸ್ಪೇನ್ ಅಥವಾ ಇಟಲಿಯಿಂದ ಆಮದು ಮಾಡಿದ ಎಣ್ಣೆಗಿಂತ ಬಲು ಬೇಗ ಸೂಪರ್ ಮಾರ್ಕೆಟ್ ತಲುಪುತ್ತವೆ. ಶೀಸೆಯ ಮೇಲೆ ಯೋಗ್ಯತಾ ಮುದ್ರೆ (certification seal) ಇದೆಯೆಂದು ಖಚಿತ ಪಡಿಸಿಕೊಳ್ಳಿ.

ಆಸ್ಟ್ರೇಲಿಯಾದಲ್ಲಿ ಉತ್ಪಾದಿಸಿದ ಶೇಕಡಾ 90ರಷ್ಟು ಆಲಿವ್ ಎಣ್ಣೆ ಎಕ್ಸ್ಟ್ರಾ ವರ್ಜಿನ್ ಬಗೆಯದು. ಆಮದುಮಾಡಿದ ಶೇಕಡಾ 90ರಷ್ಟು ಆಲಿವ್ ಎಣ್ಣೆ, ಆಸ್ಟ್ರೇಲಿಯಾದ ಯೋಗ್ಯತಾ ಮುದ್ರೆ ಪಡೆಯಲು ವಿಫಲವಾಗಿವೆ. ಕೆಳಮಟ್ಟದ ಆಲಿವ್ ಎಣ್ಣೆಯನ್ನು ಎಕ್ಸ್ಟ್ರಾ ವರ್ಜಿನ್ ಎಣ್ಣೆಗೆ ಕಲಬೆರಕೆ ಮಾಡುವುದು ಅತಿ ಸುಲಭ.

ಮುಂದಿನ ಪುಟ ನೋಡಿ ...

ಎಷ್ಟು ಬೇಕು?

ನಮ್ಮ ಆರೋಗ್ಯರಕ್ಷಣೆಗೆ ಪ್ರತಿದಿನ ಕನಿಷ್ಠ ಎರಡು ಟೇಬಲ್ ಚಮಚ ಎಕ್ಸ್ಟ್ರಾ ವರ್ಜಿನ್ ಆಲಿವ್ ಎಣ್ಣೆ ಸೇವಿಸಬೇಕು. ಮೆಡಿಟರೇನಿಯನ್ ದೇಶಗಳಲ್ಲಿ ವಾಸಿಸುವವರು ಪ್ರತಿದಿನ 60 ಮಿಲಿಲೀಟರ್ ಎಕ್ಸ್ಟ್ರಾ ವರ್ಜಿನ್ ಆಲಿವ್ ಎಣ್ಣೆಯನ್ನು ಸೇವಿಸುತ್ತಾರೆ.

ಶೇಖರಿಸಿಡುವುದು ಹೇಗೆ?

ಗಾಳಿ, ಬೆಳಕು ಮತ್ತು ಶಾಖ ತಗಲಿದರೆ ಎಣ್ಣೆಯ ಗುಣಮಟ್ಟ ಕ್ಷೀಣಿಸುತ್ತದೆ. ರುಚಿ ಕೆಡುತ್ತದೆ. ಫ್ರೀ ರಾಡಿಕಲ್ಸ್ (free radicals) ಉಂಟಾಗುತ್ತವೆ. ಹೃದಯರೋಗ, ಕ್ಯಾನ್ಸರ್ ಮುಂತಾದ ಮಾರಕ ರೋಗಗಳಿಗೆ ಮುಖ್ಯ ಕಾರಣ, ದೇಹದಲ್ಲಿ ಸಂಚರಿಸುವ ಫ್ರೀ ರಾಡಿಕಲ್ಸ್.
ಕಪ್ಪು ಬಣ್ಣದ ಗಾಜಿನ ಶೀಸೆಯಲ್ಲಿರುವ ಅಥವಾ ಸ್ಟೈನ್ ಲೆಸ್ ಸ್ಟೀಲ್ ಡಬ್ಬದಲ್ಲಿರುವ ಎಕ್ಸ್ಟ್ರಾ ವರ್ಜಿನ್ ಆಲಿವ್ ಎಣ್ಣೆಯನ್ನೇ ಖರೀದಿಸಿ.
ಗಾಳಿಯಾಡದಂತೆ ಬಿಗಿಯಾಗಿ ಮುಚ್ಚಳ ಮುಚ್ಚಿ, ತಂಪಾದ, ಬೆಳಕಿಲ್ಲದ ಸ್ಥಳದಲ್ಲಿಡಿ. ಪ್ಲಾಸ್ಟಿಕ್ ಮತ್ತು ಇತರ ಲೋಹದ ಡಬ್ಬದಲ್ಲಿರುವ ಎಣ್ಣೆಯನ್ನು ಕೊಳ್ಳಬೇಡಿ.

ಉಪಯೋಗಿಸುವುದು ಹೇಗೆ?

ಆಲಿವ್ ಎಣ್ಣೆಯನ್ನು ಎಲ್ಲಾ ವಿಧದ ಅಡುಗೆಗಳಿಗೆ ಉಪಯೋಗಿಸಬಹುದು. ಆದರೆ ಎಣ್ಣೆಯನ್ನು ಬಿಸಿ ಮಾಡಿದರೆ ಕೆಲ ಪೋಷಕಾಂಶಗಳು ನಾಶವಾಗುತ್ತವೆ. ಎಣ್ಣೆಯನ್ನು ಹಸಿಯಾಗಿಯೇ ಸಾಲಡ್ ಮೇಲೆ ಮತ್ತು ತಯಾರಿಸಿದ ಆಹಾರದ ಮೇಲೆ ಸಿಂಪಡಿಸುವುದು ಉತ್ತಮ. ಒಗ್ಗರಣೆಗೆ ಒಂದು ಟೀ ಚಮಚೆ ಎಣ್ಣೆ ಉಪಯೋಗಿಸಿ ಉಳಿದ ಎಣ್ಣೆಯನ್ನು ಆಹಾರ ಬೇಯಿಸುವ ಮಧ್ಯದಲ್ಲಿ ಅಥವಾ ಕೊನೆಯಲ್ಲಿ ಹಾಕಿ.

ಪಾಕವಿಧಾನ - ಮೆಡಿಟರೇನಿಯನ್ 'ಡ್ರೆಸ್ಸಿಂಗ್'

ಮೆಡಿಟರೇನಿಯನ್ ದೇಶದ ಜನರು ಇದನ್ನು ಹಸಿ ತರಕಾರಿಗಳ (ಸಾಲಾಡ್) ಮೇಲೂ, ಬೇಯಿಸಿದ ತರಕಾರಿಗಳ ಮೇಲೂ ಉಪಯೋಗಿಸುತ್ತಾರೆ. 3-5 ಮೇಜಿನ ಚಮಚ ಎಕ್ಸ್ಟ್ರಾ ವರ್ಜಿನ್ ಆಲಿವ್ ಎಣ್ಣೆ, 1 ಮೇಜಿನ ಚಮಚ ನಿಂಬೆ ರಸ, 1 ಹಿಳುಕು ಜಜ್ಜಿದ ಬೆಳ್ಳುಳ್ಳಿ, ರುಚಿಗೆ ತಕ್ಕಷ್ಟು ಉಪ್ಪು ಮತ್ತು ಮೆಣಸಿನ ಪುಡಿ ಬೆರಸಿಟ್ಟುಕೊಳ್ಳಿ. ಸಾಲಡ್ ಮತ್ತು ಪಲ್ಯ ಸೇವಿಸುವ ಮುನ್ನ ಈ 'ಡ್ರೆಸ್ಸಿಂಗ್' ಬೆರಸಿ. ರೆಫ್ರಿಜರೇಟರ್ ನಲ್ಲಿ ಇಡುವುದಾದರೆ ಗಾಜಿನ ಶೀಸೆಯಲ್ಲಿ ಹಾಕಿ, ಬಿಗಿಯಾಗಿ ಮುಚ್ಚಳ ಮುಚ್ಚಿ, ಒಂದು ವಾರದೊಳಗೆ ಉಪಯೋಗಿಸಿ.

ಕೊನೆಯ ಮಾತು :

1. ಸೂಕ್ತ ಆಹಾರ ಸೇವಿಸದಿದ್ದಲ್ಲಿ ಆಲಿವ್ ಎಣ್ಣೆ ಉಪಯೋಗಿಸುವುದರಿಂದ ಯಾವ ಪ್ರಯೋಜನವೂ ಇಲ್ಲ.
2. ಆಲಿವ್ ಎಣ್ಣೆಯನ್ನು ಉಪಯೋಗಿಸಬೇಕೆಂದು ನಿರ್ಧರಿಸಿದ್ದಲ್ಲಿ ಪ್ರತಿದಿನ ಕನಿಷ್ಠ 2 ಮೇಜಿನ ಚಮಚ, ಆಸ್ಟ್ರೇಲಿಯಾದಲ್ಲಿ ಉತ್ಪಾದಿಸಿದ ಎಕ್ಸ್ಟ್ರಾ ವರ್ಜಿನ್ ಆಲಿವ್ ಎಣ್ಣೆ ಬಳಸಿ.
3. ಭಾರತದಲ್ಲಿರುವ ನಿಮ್ಮ ಬಂಧುಮಿತ್ರರಿಗೆ ಆಲಿವ್ ಎಣ್ಣೆ ಉಪಯೋಗಿಸುವುದರಿಂದ ಯಾವ ಪ್ರಯೋಜನವೂ ಇಲ್ಲ; ಬದಲು ಭಾರತದಲ್ಲೇ ಉತ್ಪಾದಿಸಿದ ಶ್ರೇಷ್ಠ ಗುಣಮಟ್ಟದ ಎಣ್ಣೆಯನ್ನೇ (ಉದಾ: ಕಡ್ಲೇಕಾಯಿ ಎಣ್ಣೆ) ಬಳಸಿ ಎಂದು ತಿಳಿಸಿ. ▪

ಮಾರ್ಕಸ್ ಔರೇಲಿಯಸ್

ಡಾ ॥ ಸಿ.ವಿ. ಮಧುಸೂದನ

ರೋಮನ್ ಚಕ್ರವರ್ತಿಗಳು ಸುಮಾರು ಐನೂರು ವರ್ಷಗಳ ಕಾಲ ಯೂರೋಪಿನ ಬಹುಭಾಗವನ್ನೂ ಅಲ್ಲದೆ ಬ್ರಿಟನ್ ಮತ್ತು ಪಶ್ಚಿಮ ಏಷಿಯಾದ ಕೆಲವು ಪ್ರಾಂತಗಳನ್ನೂ ಆಳಿದರು. ಇವರಲ್ಲಿ ಜೂಲಿಯಸ್ ಸೀಸರನಂತಹ ಧೀರರು ಅನೇಕರಿದ್ದರು; ಅಗಸ್ಟಸ್, ಕ್ಲಾಡಿಯಸ್ ಮುಂತಾದ ಸಮರ್ಥರೂ, ಚಾಣಾಕ್ಷರೂ ಇದ್ದರು; ಕಲಿಗುಳ ಮತ್ತು ನೀರೋ ಬಗೆಯ ಕ್ರೂರಿಗಳೂ, ಅವಿವೇಕಿಗಳೂ ಇದ್ದರು. ಆದರೆ ಈ ಚಕ್ರವರ್ತಿಗಳಲ್ಲೆಲ್ಲ ಅತ್ಯಂತ ಗೌರವಕ್ಕೂ, ಆದರಕ್ಕೂ ಪಾತ್ರರಾದವರಲ್ಲಿ ಮಾರ್ಕಸ್ ಔರೇಲಿಯಸ್ (ಕ್ರಿ.ಶ. ೧೨೧ - ೧೮೦) ಅಗ್ರಗಣ್ಯನು. ಔರೇಲಿಯಸ್ಸನು ಒಂದು ಕುಲೀನ, ಶ್ರೀಮಂತ ಮನೆತನದಲ್ಲಿ ಜನಿಸಿದವನು. ಈತನಿಗೆ ೧೭ ವರ್ಷ ವಯಸ್ಸಾಗಿದ್ದಾಗ, ಆಗಿನ ಚಕ್ರವರ್ತಿ ಆಂಟೊನಿನಸ್ ಪಯಸ್ ಇವನನ್ನು ತನ್ನ ಉತ್ತರಾಧಿಕಾರಿಯಾಗಲು ತಕ್ಕವನೆಂದು ತಿಳಿದು, ಕಾಲಕ್ರಮದಲ್ಲಿ ತನ್ನ ಮಗಳು ಫಾಸ್ಟೀನಾಳನ್ನು ಕೊಟ್ಟು ಮದುವೆ ಮಾಡಿದನು. ಕ್ರಿ.ಶ. ೧೪೦ ರಲ್ಲಿ ಇವನನ್ನು ಚಕ್ರಾಧಿಪತ್ಯದ ಪರಮಾಧಿಕಾರಿಗಳಲ್ಲಿ ಒಬ್ಬನಾಗಿ ನೇಮಕ ಮಾಡಿದರು. ಮುಂದಿನ ಇಪ್ಪತ್ತು ವರ್ಷ ತನ್ನ ಅಧಿಕಾರವನ್ನು ದಕ್ಷತೆಯಿಂದಲೂ, ಪ್ರಾಮಾಣಿಕತೆಯಿಂದಲೂ ನಿರ್ವಹಿಸಿ ಚಕ್ರವರ್ತಿಗೆ ತುಂಬ ಅಚ್ಚುಮೆಚ್ಚಿನವನಾದನು. ಅದೇ ಸಮಯದಲ್ಲಿ ತತ್ತ್ವಶಾಸ್ತ್ರವನ್ನೂ, ನ್ಯಾಯಶಾಸ್ತ್ರವನ್ನೂ, ಆಳವಾಗಿ ಅಭ್ಯಾಸಮಾಡಿದನು. ಕ್ರಿ.ಶ. ೧೬೦ ರಲ್ಲಿ ಪಯಸ್ ದೊರೆ ಕಾಲವಾಗಲು, ಇವನನ್ನು ಸಾಮ್ರಾಜ್ಯದ ಅಧಿಪತಿಯಾಗಿ ಅಭಿಷೇಕ ಮಾಡಲಾಯಿತು. ಆಗಿನ ಕಾಲದಲ್ಲೇ ಏಕೆ, ಸುಮಾರು ಹದಿನಾರನೆಯ ಶತಮಾನದವರೆಗೂ, ಯೂರೋಪಿನಲ್ಲಿ ಯಾರಾದರೂ ರಾಜನಾದ ಕೂಡಲೇ, ಮಿಕ್ಕೆಲ್ಲ ವಾರಸುದಾರರನ್ನೂ (ಅವರು ಅಣ್ಣತಮ್ಮಂದಿರೇ ಆಗಿದ್ದರೂ ಸಹ) ಗಡೀಪಾರು ಮಾಡಿಯೋ ಅಥವಾ ಸಂಹರಿಸಿಯೋ, ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳುವುದು ಸಾಮಾನ್ಯವಾಗಿತ್ತು. ಆದರೆ ಸ್ವಭಾವತಃ ಉದಾರಿಯಾದ ಔರೇಲಿಯಸ್ಸನು ಹಾಗೇನೂ ಮಾಡಲಿಲ್ಲ, ಬದಲಿಗೆ ಸಮಸ್ತ ರಾಜ್ಯಭಾರವನ್ನು ತನ್ನ ದತ್ತು ತಮ್ಮನಾದ ಲೂಸಿಯಸ್ ವೆರಸ್ ಎಂಬುವನ ಜತೆಗೆ ಹಂಚಿಕೊಂಡನು. ರೋಮ್ ಸಾಮ್ರಾಜ್ಯಕ್ಕೆ ಒಂದೇ ಸಮಯದಲ್ಲಿ ಎರಡು ಚಕ್ರವರ್ತಿಗಳಿದ್ದುದು ಇದೇ ಮೊದಲ ಬಾರಿ. ಔರೇಲಿಯಸ್ಸನು ಚಕ್ರವರ್ತಿಯಾಗಿದ್ದಾಗ ರೋಮ್ ಸಾಮ್ರಾಜ್ಯವು ಅನೇಕ ಕಷ್ಟನಷ್ಟಗಳಿಗೆ ಒಳಗಾಯಿತು. ಆದರೆ ಇವು ಯಾವುದಕ್ಕೂ ಇವನು ಕಾರಣಕರ್ತನಲ್ಲ. ವೆರಸ್ ನ ಸೈನಿಕರು ಏಷ್ಯಾದ ಪಾರ್ಥಿಯನ್ನರನ್ನು ಅಡಗಿಸಿ ಹಿಂತೆರಳಿದಾಗ ತಮ್ಮ ಜತೆಯಲ್ಲೇ ಪ್ಲೇಗ್ ಮಾರಿಯನ್ನೂ ತಂದರು. ಇದರ ಪರಿಣಾಮವಾಗಿ ರೋಮಿನಲ್ಲಿ ಸಾವಿರಾರು ಮಂದಿ ಮೃತರಾದರು. ತಾನು ಸ್ವತಃ ಶಾಂತಿಪ್ರಿಯನಾಗಿದ್ದರೂ, ತನ್ನ ಚಕ್ರಾಧಿಪತ್ಯದ ಬ್ರಿಟನ್, ಈಗಿನ ಜರ್ಮನಿ, ಪಶ್ಚಿಮ ಏಷ್ಯಾ ಮುಂತಾದ ಮೂಲೆಮೂಲೆಗಳಲ್ಲಿ ಆಗಾಗ ನಡೆಯುತ್ತಿದ್ದ ದಂಗೆಗಳನ್ನು ಹುಟ್ಟು ಹಾಕಲು, ಪದೇಪದೇ ಯುದ್ಧ ಮಾಡಬೇಕಾಗಿ ಬಂದಿತು. ಇದಲ್ಲದೆ, ಪ್ಲೇಗಿನ ಜತೆಗೆ ರೋಮ್ ನಗರವು ಭೂಕಂಪ, ಪ್ರವಾಹ ಇತ್ಯಾದಿ ಪ್ರಕೃತಿಯ ಪ್ರಕೋಪಕ್ಕೂ ಒಳಗಾಯಿತು. ರಾಜ್ಯದಲ್ಲಿ ಕ್ಷಾಮವೂ ಉಂಟಾಯಿತು. ಪತ್ನಿ ಫಾಸ್ಟೀನಾಳು ಹದಿಮೂರು ಮಕ್ಕಳಿಗೆ ಜನ್ಮವಿತ್ತಳು. ಆದರೆ ಅವರಲ್ಲಿ ಉಳಿದವರು ಐದು ಮಂದಿ ಮಾತ್ರ. ಜೀವಮಾನ ಪರ್ಯಂತ, ಔರೇಲಿಯಸ್ಸನ ಆರೋಗ್ಯವೂ ಅಷ್ಟೇನೂ ಉತ್ತಮ ಮಟ್ಟದ್ದಾಗಿರಲಿಲ್ಲ. ಆದರೆ ಎಂಥ ಕಷ್ಟಗಳನ್ನು ಎದುರಿಸ ಬೇಕಾದರೂ ಮತ್ತು ಕರ್ತವ್ಯ ಪಾಲನೆಗಾಗಿ ಅಪ್ರಿಯವಾದ, ತನಗೆ ಅಸ್ವಾಭಿಕವಾದ ಕೆಲಸಗಳನ್ನು ಮಾಡ ಬೇಕಾದರೂ, ಔರೇಲಿಯಸ್ಸನು ತನ್ನ ಮನಸ್ಸನ್ನು ಕಹಿ ಮಾಡಿಕೊಳ್ಳಲಿಲ್ಲ, ಸಮತೋಲತೆಯನ್ನು ಕಳೆದುಕೊಳಲಿಲ್ಲ. ಸಾಮ್ರಾಜ್ಯದ ಅಖಂಡತೆಗೆ ಭಂಗವಾಗದಂತೆ ಅದನ್ನು ರಕ್ಷಿಸಿದನು. ಆದರೆ ವರ್ಷಗಳು ಕಳೆದಂತೆ, ಆತನು ಹೆಚ್ಚು ಹೆಚ್ಚು ಅಂತರ್ಮುಖಿಯಾಗಿ, stoicism (ಎಂಥ ಕಷ್ಟವನ್ನಾದರೂ ನಿರ್ವ್ಯಗ್ರತೆಯಿಂದ ಸಹಿಸುವ ಧೀರ ಸಂಯಮತೆ) ಎಂಬ ದರ್ಶನಶಾಸ್ತ್ರಕ್ಕೆ ಒಲಿದನೆಂಬುವುದರಲ್ಲಿ ಸಂದೇಹವಿಲ್ಲ. ಡ್ಯಾನ್ಯೂಬ್ ನದೀತೀರದಲ್ಲಿ ಅವನು ಒಮ್ಮೆ ವಿಹಾರಾರ್ಥವಾಗಿ ವಾಸಿಸುತ್ತಿದ್ದಾಗ meditations (ಚಿಂತನೆಗಳು) ಎಂಬ ಗ್ರಂಥವನ್ನು ಬರೆದನು. ಈ ಚಿಂತನೆಗಳು ಯಾರೋ ಬೇರೆಯವರು ಬರೆದದ್ದನ್ನು ಓದಿಯೋ ಅಥವಾ ಹೇಳಿದ್ದನ್ನು ಕೇಳಿಯೋ ಬರೆದವಲ್ಲ. ಅಂಥವು ಕೆಲವು ಇರಬಹುದು. ಔರೇಲಿಯಸ್ಸನೇ ತಾನು ಯಾರು ಯಾರಿಂದ ಏನೇನು ಕಲಿತೆ ಎಂಬ ಪಟ್ಟಿಯನ್ನು ಮಾಡಿದ್ದಾನೆ! ಆದರೆ ಹೆಚ್ಚಾಗಿ ಸ್ವಂತ ಅನುಭವದಿಂದ ಪಕ್ವವಾದ ಅಂತರಾಳದಿಂದ ಬಂದ ಮಾತಿಗಳಿವು. ಈ ಗ್ರಂಥವನ್ನು ಬರೆದು ಒಂದು ಸಾವಿರದ ಎಂಟುನೂರ ವರ್ಷಗಳ ಮೇಲಾಗಿದ್ದರೂ, ಇಂದಿಗೂ ತನ್ನ ಜನಪ್ರಿಯತೆಯನ್ನು ಕಳೆದುಕೊಂಡಿಲ್ಲ. ಇದಕ್ಕೆ ಮುಖ್ಯ ಕಾರಣ ಇಷ್ಟೆ. ಇವನ ಅನಿಸಿಕೆಗಳು ಸರಳವಾಗಿ ಕಂಡರೂ, ಅವು ಬಾಳ್ವೆಯ ಏರಿಳಿತಗಳನ್ನು ಸಮಾಧಾನ ಚಿತ್ತದಿಂದ ಎದುರಿಸುವ ಸಾಮರ್ಥ್ಯವನ್ನೂ, ಜೀವನವನ್ನು ಸಫಲಗೊಳಿಸಲು ಬೇಕಾದ ಮಾರ್ಗದರ್ಶನವನ್ನೂ ನಮಗೆ ಕೊಡಬಲ್ಲವು. ಅಂಥ ಚಿಂತನೆಗಳಲ್ಲಿ ಕೆಲವನ್ನು ಮಾತ್ರ ಓದುಗರ ಮುಂದಿಡುತ್ತಿದ್ದೇನೆ. ಪ್ರತಿ ಪ್ರಾತಃಕಾಲವೂ ಇದನ್ನು ಸ್ಮರಿಸು: ಇಂದು ನನಗೆ ಕೃತಘ್ನತೆ, ದುರಹಂಕಾರ, ದ್ರೋಹ, ಸ್ವಾರ್ಥಪರತೆ ಮುಂತಾದುವುಗಳ ಅನುಭವವಾಗಬಹುದು. ಇವೆಲ್ಲವೂ ಆಗುವುದು ಇಂಥವನ್ನು ಮಾಡುವವರಿಗೆ ಯಾವುದು ಒಳ್ಳೆಯದು ಮತ್ತು ಯಾವುದು ಕೆಟ್ಟದ್ದು ಎಂಬ ಪರಿಜ್ಞಾನವಿಲ್ಲದಿರುವುದರಿಂದ. ನನ್ನ ಮಟ್ಟಿಗಾದರೋ ಒಳ್ಳೆಯದು ಯಾವುದು ಮತ್ತು ಅದರ ಹಿರಿಮೆ, ಕೆಟ್ಟದು ಯಾವುದು ಮತ್ತು ಅದರ ಕೀಳ್ಮೆ ಇವುಗಳ ಅರಿವು ಚೆನ್ನಾಗಿದೆ, ಯುಕ್ತಾಯುಕ್ತ ವಿವೇಚನೆಯಿದೆ. ಆದ್ದರಿಂದ ಇವು ಯಾವುವೂ ನನ್ನ ಮೇಲೆ ಯಾವ ಪರಿಣಾಮವನ್ನೂ ಮಾಡಲಾರವು. ಅಲ್ಲದೆ ಕೆಟ್ಟದ್ದನ್ನು ಮಾಡಿದವರಲ್ಲಿಯೂ, ನನ್ನಲ್ಲಿರುವಂತೆಯೇ ಒಂದು ದೈವಾಂಶವಿದೆ.

ಮುಂದಿನ ಪುಟ ನೋಡಿ ...

ಹೀಗಿರುವಾಗ ಅವರ ಬಗ್ಗೆ ಕೋಪವನ್ನೂ ಮಾಡಲಾಗದು. ವಿಧಿಯು ನಿನಗೆ ಕಷ್ಟವೋ ಅಥವಾ ಸುಖವೋ, ಏನೇನನ್ನು ತರುತ್ತದೋ ಅದನ್ನು ನಿರ್ವಿಕಾರವಾಗಿ ಸ್ವೀಕರಿಸು, ಈ ಜೀವನದಲ್ಲಿ ದೇವರು ಯಾರನ್ನು ನಿನ್ನ ಒಡನಾಡಿಗಳನ್ನಾಗಿ ಮಾಡಿರುವನೋ ಅವರನ್ನು ಮನಃಪೂರ್ವಕವಾಗಿ ಪ್ರೀತಿಸು. ನಿನ್ನ ಜೀವನದ ಪ್ರತಿಯೊಂದು ಕರ್ತವ್ಯವನ್ನೂ, ಅದೇ ಕೊಟ್ಟಕೊನೆಯದೋ ಎಂಬಂತೆ ನೆರವೇರಿಸು. ಕೋಪದ ಕಾರಣಗಳಿಗಿಂತಲೂ, ಅಂಥ ಕೋಪದ ಪರಿಣಾಮಗಳೇ ಹೆಚ್ಚು ದುಃಖಕರವಾದುವು. ನಿನ್ನ ನೆರೆಯವನು ಏನು ಹೇಳುತ್ತಾನೆ, ಏನು ಮಾಡುತ್ತಾನೆ ಅಥವಾ ಏನು ಯೋಚಿಸುತ್ತಾನೆ ಎಂದು ಚಿಂತಿಸಬೇಡ. ಹಾಗೆ ಚಿಂತಿಸುವುದು ವೃಥಾ ಕಾಲಹರಣ. ಕೆಲಸವು ಸರಿಯಲ್ಲದಿದ್ದರೆ (ಅಧರ್ಮವಾಗಿದ್ದರೆ) ಅದನ್ನು ಮಾಡಬೇಡ; ಮಾತು ನಿಜವೆಂದು ನಿನಗೆ ತೋರದಿದ್ದರೆ, ಅಂಥ ಮಾತನ್ನು ಆಡಬೇಡ. ನಿನ್ನಲ್ಲಿ ಏನಿಲ್ಲ ಎಂದು ಯೋಚಿಸುವ ಬದಲು, ನಿನ್ನಲ್ಲಿ ಆಗಲೇ ಎಷ್ಟಿದೆ ಎಂದು ಯೋಚಿಸು. ಯಾರಾದರೂ ನಿನಗೆ ಅನ್ಯಾಯ ಮಾಡಿದ್ದರೆ ಅಥವಾ ನಿನ್ನನ್ನು ನೋಯಿಸಿದ್ದರೆ, ಅದಕ್ಕೆ ಸರಿಯಾದ ಮುಯ್ಯಿ ನೀನೂ ಅವರಂತೆ ಮಾಡದಿರುವುದು. ಯಾವ ಧನವನ್ನು ನೀನು ಒಳ್ಳೆಯ ಕಾರ್ಯಕ್ಕಾಗಿ ದಾನ ಮಾಡಿರುವೆಯೋ, ಅದೇ ನಿನ್ನಲ್ಲಿ ಶಾಶ್ವತವಾಗಿ ನಿಲ್ಲುವ ಐಶ್ವರ್ಯ. ನಿನ್ನ ಜೀವನದಲ್ಲಿ ನಡೆಯುವ ಅನೇಕ ಘಟನೆಗಳ ಮೇಲೆ ನಿನಗೆ ಹತೋಟಿಯಿರುವುದಿಲ್ಲ, ಇದು ನಿಜ. ಆದರೆ ನಿನ್ನ ಮನಸ್ಸಿನ ನಿಯಂತ್ರಣ ನಿನ್ನ ಕೈಯಲ್ಲಿದೆ. ಇದು ನಿನಗೆ ಅರಿವಾದರೆ ಕಷ್ಟವನ್ನು ಸೈರಿಸುವ ಶಕ್ತಿ ತಾನಾಗಿಯೇ ಬರುವುದು. ಮೇಲೆ ಉದ್ಧರಿಸಿರುವ ಚಿಂತನೆಗಳಲ್ಲಿ ಕೆಲವಾದರೂ, ಭಾರತದ ದಾರ್ಶನಿಕರಾದ ತಿರುವಳ್ಳುವರ್, ಭರ್ತೃಹರಿ, ಸರ್ವಜ್ಞ ಮುಂತಾದವರ ವಿಚಾರಗಳನ್ನು ನೆನಪಿಗೆ ತರುತ್ತವೆಯಲ್ಲವೆ? ಅದು ಹೇಗಾದರೂ ಇರಲಿ. ಮಾರ್ಕಸ್ ಔರೇಲಿಯಸ್ಸನ ಜೀವನ ಚರಿತ್ರೆಯನ್ನೂ, ಅವನ ಅನಿಸಿಕೆಗಳನ್ನೂ ಗಮನಿಸಿ ನೋಡಿದರೆ, ಭಗವದ್ಗೀತೆಯ "ಸ್ಥಿತಪ್ರಜ್ಞ" ನೂ, ಧಮ್ಮಪದದ "ನಿಜವಾದ ಬ್ರಾಹ್ಮಣ" ನೂ ಇಂಥವರೇ ಇರಬೇಕೇನೋ ಎನ್ನಿಸುತ್ತದೆ. ▪

ವಿಚಾರ ವಿಹಾರ

ಮಾಲು, ಅಡಿಲೈಡ್

'ಕಪಿಗೆ ಚಪಲತೆ ಸಹಜಂ'

ಈ ಮೇಲಿನ ವಾಕ್ಯ ಹಳೆಗನ್ನಡದ ಕವಿಯೊಬ್ಬರಿಂದ ಬಂದದ್ದು.

ಕಪಿಗೆ ಚಪಲತೆ ಸಹಜ, ಇದು ನಿಜ. ಹಾಗೆಯೇ, ನಮ್ಮ ಮನಸ್ಸಿಗೂ ಮತ್ತು ಬಾಯಿಗೂ ಕೂಡ ಚಪಲತೆ ಸಹಜ.

ಚಂಚಲ ಮನಸ್ಸಿಗೆ ಸ್ಥಿರ ಎನ್ನುವ ವಿಷಯ ಅಷ್ಟು ರುಚಿಸದು. ಮನಸ್ಸು ಚಂಚಲ, ಅದಕ್ಕೆ ಎಲ್ಲ ವಿಷಯಗಳನ್ನು ತುಂಬಿಕೊಳ್ಳುವ ಚಪಲ. ತಿನ್ನುವ ಬಾಯಿಗಂತೂ ಹೇಳಬೇಕಾದ್ದೆ ಇಲ್ಲ, ಎಲ್ಲ ರುಚಿಯಾಗಿರುವ ತಿನಿಸುಗಳು ಬೇಕು.

ಚಪಲತೆ

ಹೆಚ್ಚು ಅನವಶ್ಯಕತೆ ವಿಷಯಗಳಿಂದ ಮನಸ್ಸು ಕೆಡುತ್ತದೆ. ಜಿಹ್ವಾ ಚಾಪಲ್ಯದಿಂದ ಅತಿಯಾಗಿ ತಿಂದ ಬಾಯಿ ದೇಹ ಕೆಡಿಸುತ್ತದೆ.

ಬಾಯಿಗೆ ಅತಿಯಾಗಿ ತಿನ್ನದ ಹಾಗೆ ನಾವೇ ಆಗಾಗ ಬೀಗ ಹಾಕಬೇಕಾದ್ದ ಅವಶ್ಯಕತೆ ಇದೆ. ಬಾಯಿಗೆ ತಿನ್ನುವುದಷ್ಟೇ ಚಪಲ ಅಲ್ಲ!

ಮಾತನಾಡುವ ಚಪಲವೂ ಇದೆ. ಬೇಕಾದಾಗ ನಾವು ಬಾಯಿ ತೆರೆಯಬೇಕು, ಬೇಡವಾದಾಗ ಬಾಯಿ ಮುಚ್ಚಿಕೊಳ್ಳಬೇಕು ಅನ್ನುವ ಪ್ರಜ್ಞೆ ಇದ್ದಲ್ಲಿ, ನಮಗೂ ಲಾಭ ಮತ್ತು ನಮ್ಮ ಸುತ್ತಮುತ್ತಲಿರುವವರಿಗೂ ಲಾಭ! ಯಾವುದಕ್ಕೂ ಮಿತಿ ಇರಬೇಕು. ಯಾವುದೇ ಅತಿಯಾದರೂ ಅದರಿಂದ ಅನುಮಾನ ಖಂಡಿತ.

ಬಾಯೇ ಬಿಡದವನು ಲೆಕ್ಕಕ್ಕೆ ಬರದವನಾಗುತ್ತಾನೆ. ಹೊತ್ತು ಗೊತ್ತು ಇಲ್ಲದೆ ಬಾಯಿ ಬಿಡುವನು ಅವಹೇಳನಕ್ಕೆ ಗುರಿಯಾಗುತ್ತಾನೆ. ಈ ಮಾತುಗಳು ಶ್ರೀ ಜಿ.ಪಿ.ರಾಜರತ್ನಂ ರವರು ತಮ್ಮ 'ವಿಚಾರ ರಶ್ಮಿ'ಯಲ್ಲಿ ಹೇಳಿದ್ದಾರೆ.

ಒಂದು ಊರಿನಲ್ಲಿ ಒಬ್ಬ ರಾಜ. ಅವನ ಪುರೋಹಿತ ತುಂಬಾ ವಾಚಾಳಿ. ಎದುರಿಗೆ ಇದ್ದವರು ಆಕಳಿಸಿದರೂ ಅವನ ಪಾಡಿಗೆ ಅವನು ಸುಮ್ಮನೆ ಮಾತನಾಡುತ್ತಲೇ ಇರುವ. ಅವನ ಬಾಯಿ ಮುಚ್ಚಿಸೋದು ಹೇಗೆ ಎಂದು ಮಂತ್ರಿಗೂ ತಿಳಿಯದಾಗಿತ್ತು.

ಒಂದು ದಿನ ರಾಜ ಮತ್ತು ಮಂತ್ರಿ ತೋಟದಲ್ಲಿ ತಿರುಗುತ್ತಾ ಇರುವಾಗ, ಅಲ್ಲಿ ಒಬ್ಬ ಕುರುಬರ ಹುಡುಗನ್ನ ನೋಡಿದರು. ಅವನು ಕೈಯಲ್ಲಿ ಒಂದು ಕೊಳವೆ ಇಟ್ಟುಕೊಂಡು, ಅದರಲ್ಲಿ ಸಣ್ಣ ಕಲ್ಲನ್ನು ಹಾಕಿ ಉಫ್ ಎಂದು ಊದಿ ಮರಗಳ ಎಲೆಗಳನ್ನು ತೂತು ಮಾಡುತ್ತಿದ್ದ. ಆ ಮಂತ್ರಿಗೆ ಏನೋ ಒಂದು ಹೊಳೆಯಿತು, ದೊರೆಗೆ ಹೇಳಿದ. ದೊರೆ ಅದನ್ನು ಒಪ್ಪಿದ. ಮಂತ್ರಿ ಕುರುಬರ ಹುಡುಗನ್ನ ಕರೆದು ಏನೋ ಹೇಳಿದ. ಹುಡುಗನೂ ಆಗಲಿ ಎಂದ.

ಮಾರನೆಯ ದಿನ ಸಭೆಯಲ್ಲಿ ಕುಳಿತಾಗ ಆ ಪುರೋಹಿತ ಎಂದಿನಂತೆ ಮಾತಿಗೆ ಶುರು ಮಾಡಿದ. ಬಾಯಿ ತೆರೆದ, ಹುಡುಗ ಕೊಳವೆಯೆತ್ತಿ, ಪುರೋಹಿತನ ಬಾಯಿಗೆ ಗುರಿ ಇಟ್ಟು ಊದಿದ. ಕೊಳವೆಯಿಂದ ಹೊರಟ ಕಲ್ಲು ನೇರವಾಗಿ ಪುರೋಹಿತನ ಗಂಟಲನ್ನು ಮುಟ್ಟಿತು. ಪುರೋಹಿತ ತನಗೆ ಗೊತ್ತಿಲ್ಲದ ಹಾಗೆ ಅದನ್ನು ನುಂಗಿದ. ಮತ್ತೆ ಬಾಯಿ ಬಿಟ್ಟು ಮಾತನಾಡಲು ಹತ್ತಿದ. ತಿರುಗಿ ಇನ್ನೊಂದು ಕಲ್ಲು ಅವನ ಬಾಯಿಗೆ ಬಿತ್ತು. ಹೀಗೆಯೇ ಹತ್ತು ಹಲವು ಕಲ್ಲುಗಳು ಅವನ ಹೊಟ್ಟೆಗೆ ಸೇರಿ ಹೊಟ್ಟೆ ಉಬ್ಬರಿಸಿ ಬಂತು. ಅಂದಿನಿಂದ ಅವನು ಬಾಯಿ ಬಿಡಲು ಹೆದರುತ್ತಿದ್ದ.

ಸಾರಾಂಶ ಏನೆಂದರೆ - ತಾವಾಗಿಯೇ ತಮ್ಮ ಬಾಯಿಗೆ ಬೀಗ ಹಾಕಿಕೊಳ್ಳದಿದ್ದರೆ, ಯಾರಾದರೂ ಬರುತ್ತಾರೆ, ಬಂದು ಬೀಗ ಜಡಿಯುತ್ತಾರೆ!

ಅದಕ್ಕೆ ಅವಕಾಶ ಕೊಡದೆ ಇರುವುದೇ ಜಾಣತನ. ▪

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ಸೀನುವಿನ ಬಜೆಟ್ ವ್ಯಾಖ್ಯಾನ

'ವಾಟ್ ಎ ಬ್ಯೂಟಿಫುಲ್ ಬಜೆಟ್' ಅಂದ ಸೀನು.

'ಏನಿದೆ ಬಜೆಟ್ನಲ್ಲಿ?'

'ಈ ಬಜೆಟ್ನಿಂದ ಜನರು ಸುರಕ್ಷಿತವಾಗಿರ್ತಾರೆ. ದೇಶ ಕ್ಲೀನಾಗಿರತ್ತೆ. ಮೇಕ್ ಇನ್ ಇಂಡಿಯಾಗೆ ಒತ್ತು ನೀಡಲಾಗಿದೆ'

'ಹಣಕಾಸಿಗೂ ಇವಕ್ಕೂ ಏನೋ ಸಂಬಂಧ?'

'ನಿನಗೆ ಎಟಿಎಂನಲ್ಲಿ ದುಡ್ಡು ಡ್ರಾ ಮಾಡಕ್ಕೆ ಹೋದವ್ರ ಕೊಲೆ ಆಗಿದ್ದು ಜ್ಞಾಪಕ ಇದೆಯಾ?'

'ಹೂಂ'

'ಇನ್ನುಮುಂದೆ ಆ ತರಹದ ಘಟನೆಗಳು ಕಡಿಮೆ ಆಗಕ್ಕೆ ಮೋದಿ ಕ್ರಮ ತೊಗೊಂಡಿದಾರೆ'

'ಹೇಗೆ?'

'ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್ ಗಳ ಸರ್ವೀಸ್ ಚಾರ್ಜ್ ಜಾಸ್ತಿ ಮಾಡಿದಾರೆ. ಜನ ಹತ್ತು ಸರತಿ ಡ್ರಾ ಮಾಡೋದರ ಬದಲು ಒಂದೋ ಎರಡೋ ಸರತಿ ಡ್ರಾ ಮಾಡೋಕ್ಕೆ ಎಟಿಎಂಗೆ ಹೋಗೋದ್ರಿಂದ ಕ್ಯೂ ಚಾನ್ಸು, ಕ್ಯೂ ರೇಟು ಎರಡೂ ಕಡಿಮೆ ಆಗತ್ತೆ'

'ಡ್ರಾ ಮಾಡದೆಇದ್ರೂ ಕಾರ್ಡ್ ಬೇರೆ ಕಡೆ ಬಳಸಿದರೆ ಚಾರ್ಜ್ ಆಗತ್ತಲ್ಲೋ'

'ಅದಕ್ಕೂ ಹಿ ಹ್ಯಾಸ್ ಟೇಕನ್ ಸ್ಟೆಪ್ಸ್. ಡೈನಿಂಗ್ & ಡ್ರಿಂಕಿಂಗ್ ಔಟ್ ಗೆ ಸರ್ವೀಸ್ ಚಾರ್ಜ್ ಏರಿಸಿರೋದ್ರಿಂದ ಜನ ಹೊರಗಡೆ ತಿನ್ನೋದು ಕಡಿಮೆ ಆಗತ್ತೆ. ಔಟ್ ಸೈಡ್ ಓಡಾಡೋದು ಕಡಿಮೆ ಆದ್ರೆ ರೇಪ್ ಕೇಸ್ ಕಡಿಮೆ ಆಗತ್ತೆ. ಸೋ... ದಿಸ್ ಈಸ್ ಎ ಸೇಫ್ ಬಜೆಟ್!'

'ಅದೇನೋ ಸರಿ. ಆದರೆ ನೀರಿನ ಬಾಟಲು, ಏರೇಟೆಡ್ ಡ್ರಿಂಕ್ಸು, ಪ್ಲಾಸ್ಟಿಕ್ ಚೀಲ, ಎಲ್ಲದರ ಬೆಲೇನೂ ಏರಿಸಿದಾರಲ್ಲೋ...?'

'ತಂಗಳು ದೇಹಕ್ಕೆ ಒಳ್ಳೇದಲ್ಲ'

'ಅದಕ್ಕೂ ಇದಕ್ಕೂ ಏನೋ ಸಂಬಂಧ?'

'ರೇಟ್ ಏರಿರೋ ಹೊಟೆಲ್ ತಿಂಡಿ ಪೂರ್ತಿ ತಿನ್ನಕ್ಕಾಗದೆ ಇದ್ರೆ ಡಾಗಿ ಬ್ಯಾಗ್ ಅಂತ ಪ್ಲಾಸ್ಟಿಕ್ ಚೀಲದಲ್ಲಿ ಮನೆಗೆ ತಂದು ತಿಂತಾರಲ್ಲ, ಅದನ್ನ ತಪ್ಪಿಸಕ್ಕೆ ಪ್ಲಾಸ್ಟಿಕ್ ಚೀಲದ ರೇಟ್ ಏರಿಸಿದ್ದು. Of course, ಒಂದು ಹಿಡನ್ ಅಜೆಂಡಾನೂ ಇದೆ.'

'ಏನೋ ಅದು?'

'ನಮ್ಮ ಹಿಲ್ ರೆಸಾರ್ಟ್ಸ್ ಜನರ ಬೇಜವಾಬ್ದಾರಿತನದಿಂದ ill resorts ಆಗ್ಬಿಟ್ಟಿವೆ'

'ಅಂದ್ರೆ?'

'ಉತ್ತರ ತುದಿಯಿಂ ದಕ್ಷಿಣ ತುದಿಗೂ ಭಾರತ ದೇಶವು ಹೊಳೆಯುತಿದೆ
ಸೂರ್ಯನ ಬೆಳಕಲೂ ಟಾರ್ಚಿನ ಹೊಳಪಲೂ ಥಳಥಳ ಹೊಳಪೇ ಕಾಣುತಿದೆ

ಪ್ಲಾಸ್ಟಿಕ್ಕು ಚೀಲವು ಬೀದಿಯಲ್ ಹರಡುತ ಮಿರಮಿರಮಿರಮಿರ ಮಿಂಚುತಿದೆ
ಟೂರಿಸ್ಟು ಸ್ಪಾಟೊಳು ಬಾಟಲು ರಾಶಿಯು
ತಾನೇ ಥಳಥಳ ಹೊಳೆಯುತಿದೆ.... 2

ನೀರ್ಬಾಟಲ ಡ್ರಿಂಕ್ಸ್ ಸ್ಯಾಚೆಯ ಜನಗಳು ಕುಂತಲಿ ನಿಂತಲಿ ಎಸೆಯುತಿರೆ
ಚಂದದ ಭಾರತ ಗಾರ್ಬೇಜ್ಮೊಳಕಲಿ
ತಾನೇ ಕೊಸಕೊಸ ಕೊರಗುತಿದೆ... 2

'so?'

'so... ಗಾಂಧೀಜೀಗೆ 2019ಕ್ಕೆ ಕ್ಲೀನ್ ಇಂಡಿಯಾ ಕೊಡಬೇಕಾದ್ರೆ ಈಗಿನಿಂದಲೇ ಪ್ಲಾಸ್ಟಿಕ್ಕು, ಬಾಟ್ಲು ಕಡಿಮೆ ಮಾಡಕ್ಕೇಂತ ಅವುಗಳ ರೇಟ್ ಏರಿಸಿದ್ದಾರೆ ಮೋದಿ. ಆದ್ದರಿಂದ ದಿಸ್ ಈಸ್ ಎ ಕ್ಲೀನ್ ಬಜೆಟ್'

'ನೀನೋ, ನಿನ್ನ ಮಾತೋ... ತಲೇನೇ ಕೆಟ್ಹೋಯ್ತು. ಇರು, ಒಂದು ಸಿಗರೇಟ್ ಸೇದ್ಬಿಟ್ಟೀನಿ.'

ಮುಂದಿನ ಪುಟ ನೋಡಿ ...

‘ತಂಬಾಕು ಉತ್ಪನ್ನಗಳ ಬೆಲೆ ಜಾಸ್ತಿ ಆಗಿದೆ. ಗೊತ್ತಾ?’

‘ಹ್ಞಾಂ? ಯಾಕಂತೋ? ನನ್ನಂತಹ ಕವಿಗಳ ಗತಿ ಏನೋ?’

‘ಪರಿಸರಸ್ನೇಹಿ ಇಂಡಿಯಾಗೆ ನಿಮ್ಮದೂ ಕಾಂಟ್ರಿಬ್ಯೂಷನ್ ಇರಲಿ ಅಂತ ಈ ಉಪಾಯ.’

‘ಹೇಗೋ?’

‘ಸಿಗರೇಟ್ ಇಲ್ದೆ ಇದ್ರೆ ನಿಮಗೆ ತಲೆ ಓಡಲ್ಲ, ತಲೆ ಓಡ್ದೆ ಇದ್ರೆ ಕವಿತೆ ಮೂಡಲ್ಲ. ಆದ್ದರಿಂದ ಒನ್ ಮೋರ್ ಕವನ ಸಂಕಲನ ಹೊರಬರಲ್ಲ. ಇದರಿಂದ ಪೇಪರ್ ಉಳಿದು, ಕಾಡು ಉಳಿದು, ಪರಿಸರ ರಕ್ಷಣೆ ಆಗತ್ತೆ. ದೇರ್ ಈಸ್ ಎ ಹಿಡನ್ ಅಜೆಂಡಾ ಟೂ’

‘ಏನೋ?’

‘ಸ್ವಚ್ಛ ಭಾರತ’

‘ಗೋ ಎಹೆಡ್, ವಿವರಣೆ ನೀಡುವಂತಹವನಾಗು’

‘ಸಿಗರೇಟ್ ಸೇದಿದರೆ ಶರ್ಟ್ ಮೇಲೆ ಬೂದಿ ಬಿದ್ದು ಕೊಳೆಯಾಗತ್ತೆ. ಲೆಸ್ಸರ್ ದ ಸಿಗರೇಟ್, ಕ್ಲೀನರ್ ದ ಶರ್ಟು. ಸಿಗರೇಟ್ ಸೇದಿದವರು ಹೆಂಡತಿಗೆ ಗೊತ್ತಾಗದೆ ಇರಲೀಂತ ಗುಟ್ಕಾ, ಪಾನ್, ಅಡಿಕೆ ತಿಂದು, ಪ್ಯಾಕೆಟ್ ಎಲ್ಲೀಂದ್ರೆ ಅಲ್ಲಿ ಎಸೀತಾರೆ. ಸಿಗರೇಟ್ ರೇಟ್ ಏರಿಸಿದ್ರೆ ಆಟೊಮ್ಯಾಟಿಕಲಿ ಇವೆಲ್ಲಕ್ಕೂ ಸಂಚಕಾರ ಬಂದು ಕ್ಲೀನ್ ಇಂಡಿಯಾ ಆಗತ್ತೆ’

‘ಯೂ ಮೇ ಹ್ಯಾವ್ ಎ ಪಾಯಿಂಟ್ ದೇರ್. ಆದರೆ ತಂಬಾಕು ಬೆಳೆಯೋ ಜನರ ಗತಿ? ಅಡಿಕೆ ಬೆಳೆಗಾರರ ಗತಿ?’

‘ನೋ ಪ್ರಾಬ್ಲಮ್. ಒಂದಕ್ಕೆ ನಾಲ್ಕರಷ್ಟು ರೇಟ್ ಕೊಡೋ ಎಸ್‌ಇಝಡ್ ಗೆ ತಮ್ಮ ಜಮೀನು ಮಾರಿಬಿಟ್ರೆ ಆಯ್ತು.’

‘ಅಂದ್ರೆ... ಈ ಬಜೆಟ್ ರೈತವಿರೋಧಿ ಆಯ್ತಲ್ಲೋ ಸೀನು...’

‘ನಾಟ್ ಎಟಾಲ್. ರೈತರು ಬಿಸಿಲಲ್ಲಿ ಕಷ್ಟಪಟ್ಟು ಬೆವರು ಸುರಿಸಿ, ಇಷ್ಟೇ ದುಡ್ಡು ದುಡಿಯೋದನ್ನ ನೋಡಕ್ಕಾಗದೆ ನಮ್ಮ ಕರುಣಾಮಯಿಯಾದ ಮೋದಿ ರೈತರ ಕೈಲೂ ಚೆನ್ನಾಗಿ ದುಡ್ಡು ಓಡಾಡಲಿ, ಸಿಟಿಗೆ ಬರಲಿ, ಒಳ್ಳೇ ಲೈಫ್ ಲೀಡ್ ಮಾಡಲಿ ಅಂತ ಮುಂದಾಲೋಚನೆಯಿಂದ ಮಾಡಿರೋ ಬಜೆಟ್ ಇದು’

‘ಮತ್ತೆ ನಮ್ಮ ಕೃಷಿ ಗತಿ?’

‘ಕೃಷಿಗಿಂತ ಖುಷಿ ಮುಖ್ಯ ಮೈ ಬಾಯ್!’

‘ಟು ಹೆಲ್ ವಿತ್ ಯುವರ ಥಿಯರಿ. ಅಲ್ವೋ ಸೀನು, ಕ್ಲೀನ್ ಇರ್ಬೇಕು ದೇಶ ಅನ್ನೋವ್ರು ಡ್ರೈ ಕ್ಲೀನ್ ರೇಟ್ ಯಾಕೋ ಏರಿಸಿದ್ದು?’

‘ಹಿಡನ್ ಅಜೆಂಡಾ...’

‘ಏನೋ ಅದು?’

‘ಡ್ರೈಕ್ಲೀನ್ ರೇಟ್ ಏಸ್ಕೋದ್ರಿಂದ ಜನ ತಮ್ಮ ಬಟ್ಟೆ ತಾವೇ ಒಗೆದುಕೊಳ್ತಾರೆ. ತಾವೇ ಐರನ್ ಮಾಡ್ಕೊಳ್ತಾರೆ. ಹೀಗೆ ತಮ್ಮ ಕೆಲಸಾನ ತಾವೇ ಮಾಡ್ಕೊಳೋದೇ ಮೇಕ್ ಇನ್ ಇಂಡಿಯಾದ ಬೇಸಿಕ್ಸು!’

‘ಸರಿ. ಆದರೆ ಈ ಫ್ರಿಡ್ಜ್ ಬೆಲೆ ಏರಿಸಿದ್ದು, ಮೈಕ್ರೋವೇವ್ ಒವನ್ ಬೆಲೆ ಇಳಿಸಿದ್ದು ಯಾಕೆ?’

‘ಹೆಲ್ತಿ ಇಂಡಿಯಾ ದೃಷ್ಟಿಯಿಂದ. ಮೋದಿ ಯಾರು?’

‘ನಮ್ಮ ಪ್ರಧಾನಿ.’

‘ಅದಕ್ಕೂ ಮುಂಚೆ? ತುಂಬಾ, ತುಂಬಾ ಮುಂಚೆ?’

‘ಟೀ ಮಾರೋ ಹುಡುಗ.’

‘ಎಕ್ಸಾಕ್ಟ್ಲಿ ! ಟೀ ಮಾರೋ ಹುಡುಗನಿಗೆ ಗರ್ಮಾಗರಂ ಚಾಯ್ ಬಿಸಿ ಮಾಡ್ಕೊಳೋ ಒವನ್ ಮುಖ್ಯಾನೇ ಹೊರತು ತಂಗಳು ಪಂಗಳು ಇಟ್ಟು ಜನಗಳ ಆರೋಗ್ಯ ಕೆಡಿಸೋ ಫ್ರಿಡ್ಜ್ ಅಲ್ಲ.’

‘ಬಟ್, ಮನೇಲಿರೋಣಾಂದ್ರೂ ಕೇಬಲ್, ಡಿಟಿಹೆಚ್ ಬೆಲೆ ಏರಿಸಿದ್ದಾರೆ...’

‘ಬ್ರಿಲಿಯಂಟ್ ಅಲ್ವಾ... ಇದಕ್ಕೆ ಅವರಿಗೆ ಸರ್ ಎಂ. ವಿಶ್ವೇಶ್ವರಯ್ಯನೇ ಆದರ್ಶವಂತೆ’

‘ಸರ್ ಎಂ.ವಿ. ಯಾವಾಗ ಕೇಬಲ್ ಬೆಲೆ ಏರಿಸಿದ್ರೋ?’

‘ಅದಲ್ವೋ... ಹೇಗೂ ಕೇಬಲ್ಲು, ಡಿಟಿಹೆಚ್ಚಲ್ಲಿ ನೋಡಕ್ಕೆ ಆಗದೆ ಇರೋದು, ಅಥವಾ ನೋಡಬಾರದ ಪ್ರೋಗ್ರಾಮುಗಳೇ ಬರೋದು. ಜನ ಅದನ್ನ ಬಿಟ್ಟು ಸರ್ ಎಂ.ವಿ. ತರಹ ಮಂದ ಬೆಳಕಲ್ಲಿ ಓದಿದ್ರೆ ಬ್ರಿಲಿಯಂಟ್ ಆಗಬಹುದೂಂತ ದೂರಾಲೋಚನೆ ಮಾಡಿ ಇವೆರಡರ ಬೆಲೆ ಏರಿಸಿ ಎಲ್‌ಇಡಿ, ಎಲ್ಸಿಡಿ ಬೆಲೆ ತಗ್ಸಿದಾರೆ.’

ಮುಂದಿನ ಪುಟ ನೋಡಿ ...

‘ಥೀಂ ಪಾರ್ಕು, ಎಂಟರ್ಟೈನ್ ಮೆಂಟ್ ಪಾರ್ಟಿಗಳು ಇವುಗಳ ಟ್ಯಾಕ್ಸ್ ಏರಿಸಿರೋದೂ ಜನ ಮನೇಲಿದ್ದು ಓದಲಿ ಅಂತಾನಾ?’

‘ಗುಡ್. ನಿನಗೂ ಕೊಂಚ ಬಜೆಟ್ ಅರ್ಥ ಆಗಿದೆ ಅಂತ ಆಯ್ತು.’

‘ಆದರೆ ಎಲ್ಲ ಅಂದ್ರೆ ಎಲ್ಲಕ್ಕೂ ಸರ್ವೀಸ್ ಟ್ಯಾಕ್ಸ್ ಜಾಸ್ತಿ ಮಾಡಿದಾರಲ್ಲೋ... ನೋಡಿದ್ರೆ ಎದೆ ಒಡೆದ ಹಾಗೆ ಆಗತ್ತಪ್ಪ’

‘ನೋ ಪ್ರಾಬ್ಲಮ್. ಅದಕ್ಕೇಂತಾನೇ ಪೇಸ್ ಮೇಕರ್ ರೇಟ್ ಕಡಿಮೆ ಮಾಡಿದಾರೆ.’

‘ಆದ್ರೂ... ಎಲ್ಲೆಲ್ಲೂ ಇಂಡಸ್ಟ್ರೀಸೇ ಬಂದು, ಹಸಿರು ನಾಶವಾಗಿ, ಆರೋಗ್ಯ ಕೆಟ್ಟರೆ?’

‘ನೋ ಪ್ರಾಬ್ಲಂ. ಆಂಬುಲೆನ್ಸ್ ರೇಟ್ ಕಡಿಮೆ ಮಾಡಿದ್ದಾರೆ.’

‘ಅಲ್ವೋ, ಫಿಲಂ ರೇಟ್ ಜಾಸ್ತಿ, ಡಿಟಿಹೆಚ್ ಜಾಸ್ತಿ, ಹೊಟೆಲ್ ದುಬಾರಿ, ಡ್ರಿಂಕ್ಸ್ ತುಟ್ಟಿ, ಸಿಗರೇಟ್ ಸುಡೋಮಟ್ಟಕ್ಕೆ ರೇಟು. ಕಾಮನ್ ಮ್ಯಾನ್ ಏನ್ಮಾಡ್ಬೇಕೋ?’

‘ಝೂಗೆ ಹೋಗಲಿ. ಅದರ ರೇಟ್ ಕಡಿಮೆ ಮಾಡಿದಾರೆ’

‘ಯಾಕೆ?’

‘ಏನೂ ಇಲ್ದೇ ಇದ್ದಾಗ ಮನುಷ್ಯ ಹೇಗೆ ಇರಬೇಕೂಂತ ಪ್ರಾಣಿಗಳನ್ನ ನೋಡಿ ತಿಳಿದುಕೊಳ್ಳಲಿ.’

‘ಯಾಕೋ ಬದ್ಕೋಕ್ಕಿಂತ ಸಾಯೋದೇ ಸುಲಭ ಅನ್ಸತ್ತಲ್ಲೋ ಸೀನು...’

‘ಆಹ್! ಮೋದಿಯವರು ಸಾವಿನ ಬಗ್ಗೇನೂ ಸೊಗಸಾಗಿ ಯೋಚನೆ ಮಾಡಿಬಿಟ್ಟಿದ್ದಾರೆ’

‘ಏನೋ?’

‘ಶವಕ್ಕೆ ತಣ್ಣೀರು ಬೇಡ, ಬಿಸಿನೀರೇ ಇರಲಿ ಅಂತ ಸೋಲಾರ್ ವಾಟರ್ ಹೀಟರ್ ಬೆಲೆ ಕಡಿಮೆ ಮಾಡಿದ್ದಾರೆ. ಕಡೇ ಸವಾರೀಲಾದ್ರೂ ಸುವಾಸನೆ ಇರಲಿ ಅಂತ ಅಗರಬತ್ತಿ ರೇಟ್ ಕಡಿಮೆ ಮಾಡಿದ್ದಾರೆ!’ ▪

ಸುಮ್ಮಕೆ ನಕ್ಕಿಡಿ

ತಗೋಪ್ಪ, ಈ ಬ್ಯಾಟ್ನಲ್ಲಿ ಚೆನ್ನಾಗಿ ಬಾರಿಸಬಹುದು



ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com

SRI KRISHNA TRAVEL
Travel with a Smile
Contact Mr Sudheendra Rao EMAIL
Mobile 0415 291 723

choice HOME LOANS
Contact Mr.Sathya Bhat EMAIL
Mobile 0412 918 511

Umesh Nagasandra FT
ABN 55 405 83 51 32
Umesh Nagasandra
Mob: 0401 034 456
Email: umesh61@gmail.com
Web: www.arman.com.au
P.O. Box # 4127, Tranmere North, South Australia-5073, Australia.
Contact Mr Umesh EMAIL
Mobile 0401 034 456

AUSTINDIA SANGAM TRANSPORT
Contact Mr Eranna Gotyal EMAIL
Mobile 0404 215 605

ಜಂಭದ ಕತ್ತೆ

ಕನಕಾಪುರ ನಾರಾಯಣ

ಪ್ರತಿಮೆಗಳನ್ನು ಮಾಡುವ ಶಿಲ್ಪಿಯೊಬ್ಬ ತನ್ನ ಕುಶಲದಿಂದ ಎಂದಿನಂತೆ ಒಂದು ಸುಂದರ ಪ್ರತಿಮೆಯನ್ನು ಕೆತ್ತಿ, ಅದನ್ನು ಒಂದು ಕತ್ತೆಯಮೇಲೆ ಸಾಗಿಸುತ್ತಿದ್ದ.ಹಾದಿಯಲ್ಲಿ ಹೋಗುವಾಗ ಅದನ್ನು ಕಂಡವರೆಲ್ಲಾ ಒಂದು ಕ್ಷಣ ನಿಂತು ಅದಕ್ಕೆ ನಮಸ್ಕರಿಸಿ ಮುಂದೆ ಹೋಗುತ್ತಿದ್ದರು.ಆದರೆ ಅದನ್ನು ಹೊತ್ತು ಸಾಗುತ್ತಿದ್ದ ಕತ್ತೆಯು ಎಲ್ಲರೂ ನನ್ನನ್ನೇ ನೋಡುತ್ತಿದ್ದಾರೆ ಎಂದು ತಿಳಿದು ಜಂಭ ಪಟ್ಟಿತು,ಸ್ವಲ್ಪ ಹೊತ್ತಿನ ಬಳಿಕ ಜನರೆಲ್ಲಾ ಕಿಕ್ಕಿರಿದು ನೋಡುತ್ತಿರಲು ಇದ್ದಕ್ಕಿದ್ದಹಾಗೇ ಮುಂದೆ ಸಾಗದೇ ಒಂದು ಕಡೆ ಕಲ್ಲಿನ ಹಾಗೆ ನಿಂತಿತು.ಶಿಲ್ಪಿ ಎಷ್ಟು ಜಗ್ಗಿದರೂ ಕದಲಲಿಲ್ಲ ಕತ್ತೆ, ಸರಿ ಮುಂದೇನೂ ಮಾಡಲು ತೋಚದೆ ಶಿಲ್ಪಿ ಆ ಶಿಲೆಯನ್ನೇ ಇತ್ತಿಕೊಂಡು ಮುಂದೆ ಸಾಗಿದ.ಕತ್ತೆ ಜಂಭದಿಂದ ತನ್ನ ಕತ್ತನು ಎತ್ತಿ ಸುತ್ತಲೂ ನೋಡಿತು,ಯಾರೂ ಕಾಣುತ್ತಿಲ್ಲ ಎಲ್ಲರೂ ಆ ಶಿಲ್ಪಿ ಹೊತ್ತು ಸಾಗುತ್ತಿದ್ದ ಪ್ರತಿಮೆಯನ್ನೇ ಹಿಂಬಾಲಿಸುತ್ತಿದ್ದರು.ಕತ್ತೆಗೆ ತನ್ನ ತಪ್ಪು ಅರಿವಾಯಿತು,ಓಡಿ ಹೋಗಿ ಗುಂಪನ್ನು ಸೇರಿತು.ಮತ್ತೆ ಶಿಲೆಯನ್ನು ತನ್ನ ಬೆನ್ನಿಗೇರಿಸಿ ಮುಂದೆ ಸಾಗಿತು. ▪

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ “ಚಕ್ಕೆ ಮೊಗ್ಗು”

ಸುದರ್ಶನ್. ಏನ್
ಇವರ “ಅನಿವಾಸಿ”



ಬದರಿ ತ್ಯಾಮಗೊಂಡ್ಲು
ಇವರ “ಕಾವ್ಯ ಕಸ್ತೂರಿ”

ಸ್ಮಿತಾ ಮೇಲ್ಕೋಟೆ
ಇವರ “ಮಂದಹಾಸ”

ಮಹಾಂತೇಶ್ ಸಿ.
ಇವರ “ಹಂಗ ಸುಮ್ನ್...”

ಹಸಿ ಗೊಜ್ಜು

ಬೇಕಾಗುವ ಸಾಮಗ್ರಿಗಳು

- ಒಂದು ಎಳೇ ಸೌತೇಕಾಯಿ, ಅರ್ಧ ಚಮಚ ಉಪ್ಪು
- ಒಂದು ಬಟ್ಟಲು ಮೊಸರು, ಹಸಿ ಶುಂಟಿ ಸಣ್ಣ ತುಂಡು
- ವಗ್ಗರಣೆಗೆ
  - ಎರಡು ಚಮಚ ತುಪ್ಪ, ಕರಿಬೇವು, ಸಾಸಿವೆ, ನಾಲ್ಕು ಒಣಮೆಣಸಿನ ಕಾಯಿ

ಮಾಡುವ ವಿಧಾನ

- ಸೌತೇಕಾಯನ್ನು ಹಸಿಮೆಣಸಿನಕಾಯಿ,ಹಸಿ ಶುಂಟಿಗಳನ್ನು ಸಣ್ಣಗೆ ಹೆಚ್ಚಿಕೊಳ್ಳಿ
- ಹೆಚ್ಚಿದ ಮಿಶ್ರಣವನ್ನು ಮೊಸರಿಗೆ ಉಪ್ಪು ಸೇರಿಸಿ ಕಲಸಿ
- ತುಪ್ಪದ ವಗ್ಗರಣೆಯಲ್ಲಿ ಸಾಸಿವೆ ಸಿಡಿಸಿ ಒಣಮೆಣಸಿನ ಕಾಯಿ ಹಾಕಿ
- ಕಲಸಿದ ಮಿಶ್ರಣಕ್ಕೆ ವಗ್ಗರಣೆ ಬೆರೆಸಿ.
- ಗಮನಿಸಿ ಇದನ್ನು ಈರುಳ್ಳಿ, ಮೂಲಂಗಿಯಿಂದಲೂ ಮಾದಬಹುದು.

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ರೆಸಿಪಿ ಕೊಡ್ತೀರಾ!

ಒಂದರ ಲ್ಲೊಂದು ಒಗಟು

೧.ಹಿರಿದಾದ ಊರು ಎಂಬಾರ್ಥ ಕೊಡುವ ಮೂರಕ್ಷರದ ನಗರವು
೨.ಮೊದಲೆರೆಡು ಮುಸ್ಲಿಂ ದೊರೆಯ ಕೊನೆಗೆ ಹಚ್ಚುವ ಪದವು
೩.ಕೊನೆಯೆರಡು ಕೂಡಿ ಶಿವನೆಂಬ ಅರ್ಥವು
೪ ಮೊದಲಿಗೆ ಕೊನೆಯಕ್ಷರ ಸೇರಿ ಬಾಣ ಎಂಬಾರ್ಥ ಚೆಂದವು

ಉತ್ತರಕ್ಕೆ ಪುಟ ೧೬ ನೋಡಿ

ಅವಳು ...

ಅವಳು ನನ್ನ ಕಾವ್ಯ
ಅವಳೆ ದವಸ ಧಾನ್ಯ
ಅವಳೆ ನನಗೆ ಮಾನ್ಯ

ಮನಸಿನಲ್ಲಿ ಮಹವು
ಕನಸಿನಲ್ಲಿ ಜಪವು
ಮೌನವಿರುವ ತಪವು

ಅವಳು ನನಗೆ ದೃಷ್ಟಿ
ನನ್ನ ಮನೋ ಸೃಷ್ಟಿ
ಪ್ರತಿವರ್ಷದ ವೃಷ್ಟಿ

ಅವಳು ನನಗೆ ಜಲವು
ಜೀವ ಮುಕ್ತಿ ಫಲವು
ಬದುಕುಳಿಸುವ ಒಲವು

ಸಿಹಿಗಳಲ್ಲಿ ಜೇನು
ಬೆಳೆದು ನಿಂತ ಕಾನು
ಬೆಳಕು ಈವ ಭಾನು

ಅವಳೆ ಘಮದ ಘ್ರಾಣ
ಜೀಕುತಿರುವ ಪ್ರಾಣ
ನನ್ನ ಎದೆಯ ತ್ರಾಣ

ಅವಳೆ ನನ್ನ ಸತಿಯು
ಉತ್ಕೃಷ್ಟ ರೂಪ ರತಿಯು
ಉತ್ತುಂಗ ಕಾಮವತಿಯು

ಅವಳೆ ನನ್ನ ವನಿತೆ
ನನ್ನ ಎಲ್ಲ ಘನತೆ
ಮನೆ ಬೆಳಗುವ ಹಣತೆ

ಎದುರು ಇರುವ ವಿಧಿಯು
ಅವಳು ಮುತ್ತು ಹವಳ
ಬಾಳ ತಟ್ಟೆಯಲ್ಲಿ
ಬಂದು ಬಿದ್ದ ಕವಳ

ರಚನೆ: ಮಾಲು, ಅಡಿಲೇಡ್

ಜಾಣ ಕರ್ನಾಟಕ

೧. ಪಣಿಯಮ್ಮ ಚಿತ್ರ ಯಾವ ಖ್ಯಾತ ಲೇಖಕಿಯ ಕಾದಂಬರಿಯ ಅಧಾರಿತ ಚಿತ್ರ? ಈ ಚಿತ್ರದ ನಿರ್ದೇಶಕರು ಯಾರು? ನಾಯಕಿ ಪ್ರಧಾನ ಈ ಚಿತ್ರದ, ಮುಖ್ಯ ನಟಿ ಯಾರು?

೨. ಮೈಸೂರು ಸಂಸ್ಥಾನದ ಆಸ್ಥಾನ ವಿದುಷಿಯಾಗಿ, ನರ್ತಕಿಯಾಗಿ, ಕಲೆಗೆ ಅಪಾರ ಕೊಡುಗೆ ನೀಡಿ, ಪದ್ಮಭೂಷಣ ಸೇರಿದಂತೆ ಹಲವಾರು ಪ್ರಶಸ್ತಿಗಳನ್ನು ಗಳಿಸಿ, ೯೬ ವರ್ಷಗಳ ತುಂಬು ಜೀವನ ನಡೆಸಿ ೨೦೦೨ ರಲ್ಲಿ ನಿಧನರಾದ ಕಲಾವಿದೆ ಯಾರು? ಇವರ ಸಂಗೀತ ಹಾಗೂ ನೃತ್ಯ ಗುರುಗಳನ್ನು ಹೆಸರಿಸ ಬಲ್ಲಿರಾ?

ಸರಿ ಉತ್ತರಕ್ಕೆ ಪುಟ ೨೧ ನೋಡಿ

ಹಾಸ್ಯ ಚಿಲುಮೆ

ತಿಮ್ಮನ ಹೆಂಡತಿ: ನಿನ್ನಗಂಡ ದಿನಾ ಕುಡ್ಕೊಂಡು ಬರ್ತಾನಲ್ಲಾ ನೀನು ಕೇಳಲ್ವಾ?

ಗುಂಡನ ಹೆಂಡತಿ: ಕೇಳ್ದೆ.....ಕೊಡಲ್ಲಾ ಅಂದ್ರು

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ಒಂದರಲ್ಲೊಂದು ಒಗಟು – ಉತ್ತರ

೧. ಶಹರ ೨. ಶಹ ೩.ಹರ ೪. ಶರ

ಮುಂಜಾವಿನ ಸೊಬಗು

ಚಿಗುರಿದ ಸೊಂಪಿನ ಮರಗಳ ಮೇಲೆ
ಕುಹೂ ಕುಹೂ ಕೋಗಿಲೆ ಕೂಗುತಿಹೆ
ಚಿಲಿಪಿಲಿ ಗುಟ್ಟುವ ಹಕ್ಕಿಯ ಕಲರವ
ಸವಿಗಾನದೊಳು ಮೊಳಗುತಿಹೆ.

ಬಗೆ ಬಗೆ ಬಣ್ಣದ ಹೂಗಳು ಅರಳಿ
ಘಮ ಘಮ ಪರಿಮಳ ಬೀರುತಿಹೆ
ಮುಂಜಾವಿನ ರವಿ ಕಿರಣಗಳೆದುರು
ಪ್ರಕೃತಿಯ ಸೊಬಗು ಚಿಮ್ಮುತಿಹೆ.

ಗಿರಿ ಶಿಖರದೊಳು ಸುಂದರ ನವಿಲು
ಕೂಗುತ ನಾಟ್ಯವ ನಾಡುತಿಹೆ
ಮುಂಜಾವಿನೊಳು ಮುಂಗೋಳಿಗಳು
ಕೂಗುತ ಎಲ್ಲರ ಎಚ್ಚರಿಸುತಿಹೆ.

ಮೂಡಣ ದಿಕ್ಕಿನ ಗಾಳಿಯು ಬೀಸಿ
ಗಿಡಮರಗಳು ಅಲ್ಲಾಡುತಿಹೆ
ಪಡುವಣ ಕಡಲಿನ ತೆರೆಗಳು
ಬೋರ್ಗರೆಯುತ ಬಂದು ಅಪ್ಪಳಿಸುತಿಹೆ.

-ನಳಿನಾಕ್ಷಿ ಹೀನಗಾರ್

ಸಿಡ್ನಿ ಮತ್ತು ಮಳೆ

ಸಿಡ್ನಿ ವಲಸೆ ಬಂದೂರು
ಹೊರಗಡೆ ಬಿಸಿಲು ಜೋರು
ಮೊದಲ ದಿನಗಳು ಕಡು ಬೋರು
ಅವಕಾಶದ ಹುಡುಕಾಟದ ಕಾರುಬಾರು !1!

ಸೆಂಟ್ರ್ ಲಿಂಕ್,ಬ್ಯಾಂಕ್,ಮೆದಿಕೆರನಲ್ಲಿ ಮೊದಲ ವಾರ
ಸಂಜೆ ಸೀಕ್.ಕಾಮನಲ್ಲಿ ಜಾತಕದ ಪ್ರವರ
ಯಾರಾದರೂ ಕರೆ ಮಾಡುವವರೇ? ಎಂಬ ಕಾತುರ
ಮುಗಿದಿದ್ದು ತಿಳಯಲಿಲ್ಲ ಮೊದಲ ವಾರ !2!

ಮಗಳು,ಮಡದಿ ಬೆಂಗಳೂರಿಗೆ ಪಯಣ
ಅನಿಸಿತಿಲ್ಲಿ ಮಾಡವದು ಸಂಸಾರ ಕಠಿಣ
ಕೆಲಸದ ಅಲೆದಾಟ ನಿತ್ಯ ನವನವೀನ
ಬ್ರೆಡ್ಡು,ಅನ್ನ,ಉಪ್ಪನಿಕಾಯಿಯೇ ನನ್ನ ಜೀವನ !3!

ಮಳೆ ಮತ್ತೆ ಬರುತಿದೆ,
ಹಳೆಯದೆಯಲ್ಲ ನೆನಪಿಸುತಿದೆ
ಮಳೆಯ ಶಕ್ತಿ ಅಪಾರ
ಮಗಳ ನೆನಪು ನಿರಂತರ !4!

ಇರುವದೆಲ್ಲವ ಬಿಟ್ಟು ಇರದುದಕಡೆ ತುಡಿಯುವದೆ ಜೀವನ
ಕವಿ ಅಡಿಗರ ಸಾಲು ನಿರಂತರ ಸತ್ಯ
ಹೊಂದಿಕೊಂಡು ಬೇಗ,ಸಂಸಾರ ಕರೆಸುವಲ್ಲಿ ಗಮನ
ತಲುಪುವನೇ ನಾನು ನಿರ್ಧರಿಸಿದ ಗಮ್ಯ??? !5!

-ಮಹಾಂತೇಶ್ . ಸಿ

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

೧. ಪೋಲೀಸನ ಮಗಳಾಗಿಯೂ ಖ್ಯಾತಿಗಳಿಸಿದ ಜನಪ್ರಿಯ ರಂಗನಟಿ.



೨. ತಾರೆಯ ನಡುವಲ್ಲಿ ಅವರೆಯ ನಡುವು ಸೇರಿಕೊಂಡದ್ದಕ್ಕೆ ಕಮಲ ಬಂದಳು.

೩. ಲೆಕ್ಕವಿದ್ದೂ ಲೆಕ್ಕಹಾಕಲಾಗದಷ್ಟು.

೪. ಕುದಿಯುವ ನೀರು ಮೈಮೇಲೆ ಬಿದ್ದಾಗ ಆಗಿದ್ದು, ಕೂಗಿದ್ದು.

೫. ಆಗಿದ್ದು ಅಂತಿಂಥ ಸಂತೋಷವಲ್ಲ, ಬಲು ಬಲು ಸಂತೋಷ.

೬. ನಾನು ಹೇಳುವುದು ಬರಿಯ ಬಾಯಿ ಮಾತಲ್ಲ, ಹೃದಯದಿಂದ ಬಂದದ್ದು.

೭ ಕರ್ನಾಟಕದ ಪ್ರಸಿದ್ಧ ಎಲ್ಲಮ್ಮನ ಜಾತ್ರೆ ನಡೆಯುವ ಊರು.



ಉತ್ತರ

ಪ್ರತಿಭಾವಂತ ಲೇಖಕಿಯರಿಗೆ ಒಲಿದು ಬರುವ ಇತಿಹಾಸ ಪ್ರಸಿದ್ಧ. ಕೊಡುಗೈ ಜೈನ ಭಕ್ತೆ.



ನಿಮ್ಮ ಉತ್ತರ ಈಮೈಲ್ ಮಾಡಿ, (horanadachilume@gmail.com)

ಮಾರ್ಚ್ 25 ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಫೆಬ್ರವರಿ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಸರಿಯಾಗಿ ಉತ್ತರಿಸಿದವರು

- ಸುಮ ಅಶೋಕ್, ಸಿಡ್ನಿ
- ರಾಘವೇಂದ್ರ ಮೂರ್ತಿ, ಬೆಂಗಳೂರು
- ಬಿ.ಆರ್. ವತ್ಸಲಾ ದ್ವಾರಕನಾಥ್, ಕೆ.ಜಿ.ಎಫ್
- ಪುಷ್ಪವಲ್ಲಿ ಚಂದ್ರಶೇಖರ್, ಕೆಂಗೇರಿ

ಫೆಬ್ರವರಿ ತಿಂಗಳ ಪದಪುಂಜದ ಉತ್ತರ

೧. ಮಾನ್ಯನು ಎಲ್ಲರೊಡನೆ ಬೆರೆತು, ತಾನೂ ಎಲ್ಲರಂತೇ ಆದಾಗ ಅವನು ಕೂಡ ಆಗುವನು.

ಸಾ	ಮಾ	ನ್ಯ

೨. ನಾಲ್ಕು ಜನರು ಆಡುವುದಕ್ಕೆ ನಾಟಕದ ವೇದಿಕೆಯೇನೂ ಬೇಕಿಲ್ಲ.

ಚ	ದು	ರಂ	ಗ

೩. ವರ ಕೊಟ್ಟಂತೆ ಋಣ ತೀರಿಸಲು ಬಂದ ಮಳೆರಾಯ.

ವ	ರು	ಣ

೪. ಊರಿನ ಒಳ್ಳೆಯದಕ್ಕಾಗಿ ಕಾರ್ಯ ನಡೆಸುವವನೇನು ಈತ?

ಪು	ರೋ	ಹಿ	ತ

೫. ಸಂಗಾತಿ ಬಯಸುವುದು ಇದನ್ನೇ!

ಸಾಂ	ಗ	ತ್ಯ

೬. ಯೋಗದ ಒಂದು ಅವಿಭಾಜ್ಯ ಅಂಗ ಹಾಸನಕ್ಕೆ ಬಲು ಹತ್ತಿರ.

ಆ	ಸ	ನ

ಉತ್ತರ: ಸರಳವಾದ ಮಾತುಗಳೇ ಕನ್ನಡದಲ್ಲಿ ಜನಪ್ರಿಯ ಆರಾಧನಾ ವಿಧಾನವಾಯಿತು.

ವ	ಚ	ನ	ಸಾ	ಹಿ	ತ್ಯ

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮ ಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪

NRI SEVA
Educational, Legal, financial, Health, Reality management services
Liaison work, Tours & Travels
visit www.nriseva.in or contact
Singapore – Harish +6598691760
Canada – SowmyaKeshava – 00968-99226928
Australia – Nagendra A- 0061401193852
Contact Mr. Nagendra EMAIL 0401193852

ತಮ್ಮ ಮನೆಯ ಮುಂದೆ ತಾವಿಟ್ಟ ರಂಗೋಲಿ ಕಳಿಸಿದವರು - ದಿವ್ಯಶ್ರೀ ವಿಕ್ರಮ್, ಬೆಂಗಳೂರು

ಮಹಿಳಾ ದಿನಾಚರಣೆ !

ಸ್ಮಿತಾ ಮೇಲ್ಕೋಟೆ

ಬೆಳಿಗ್ಗೆ ಅಲಾರ್ಮ್ ಹೊಡೆಯಕ್ಕೂ ಮುಂಚೆಯೇ whats app ಪಿಂಗಿಸ್ತಾ ಇತ್ತು .. ಅರ್ಧ ತೆರೆದ ಕಣ್ಣಲ್ಲೇ ಏನು ಅರ್ಜೆಂಟ್ ಮೆಸೇಜ್ ಬಂದಿದೆಯೋ ಅಂತ ಚೆಕ್ ಮಾಡಿದೆ. ನಮ್ಮ ಲೋಕಲ್ ಮಹಿಳಾ ಮಣಿಗಳ ಗುಂಪೊಂದು " ಮಹಿಳಾ ದಿನಾಚರಣೆ " ಅಂತ ಗುಂಪೊಂದು ಕಟ್ಟಿಕೊಂಡು ಏನು ಮಾಡೋದು ಎತ್ತ ಅಂತ ದಿನ ಬೆಳಗಾದರೆ ಚರ್ಚೆ ನಡೆಯುತಿತ್ತು.

ಭಾನುವಾರದ ಒಂದು ಸುಮಹೂರ್ತದಲ್ಲಿ ಎಲ್ಲರೂ ಸಿಡ್ನಿಯ ಒಂದು ಕೆಫೆಯಲ್ಲಿ ಸೇರಿ , ಮಹಿಳಾ ದಿನಾಚರಣೆಯ ಸಂಭ್ರಮ , ಸಂತೋಷ ಹಂಚಿಕೊಳ್ಳುವ ಉದ್ದೇಶ ಸಫಲಗೊಳ್ಳುವ ಕಾಲ ಹತ್ತಿರ ಬಂದಿತ್ತು .

ಲಲನಾ ಮಣಿಗಳು, ಮಹಿಳಾ ದಿನಕ್ಕೆ ಯಾವ ಬಣ್ಣದ ಬಟ್ಟೆ, ಯಾವ ಕಲರ್ ತುಟಿಗೆ , ಎಷ್ಟು ಹೊತ್ತಿಗೆ, ಯಾರು ಯಾರನ್ನು ಪಿಕ್ ಅಪ್ ಮಾಡಬೇಕು, ಯಾರನ್ನು ಮನೆಗೆ ಬಿಡಬೇಕು ಎಂಬ ಚರ್ಚೆಯ ವಿಷಯವೇ ದಿನದಿಂದ ದಿನಕ್ಕೆ ಹೆಚ್ಚುತ್ತಾ ಇತ್ತು ಹೊರತು ಮಹಿಳಾ ದಿನದ ಆಚರಣೆಯ ಅಜೆಂಡಾನೇ ಮಾಯವಾಗಿತ್ತು. ನಾನೂ ಗುಂಪಿನಲ್ಲಿ ಗೋವಿಂದ ಅಂತ ಯಾರು ಏನು ಹೇಳುತ್ತಾರೋ ಅದಕ್ಕೆ ಅಸ್ತು ಅಸ್ತು ಅಂತ ನನ್ನ ಹೆಬ್ಬಟ್ಟಿನ ಮುದ್ರೆ 👍 ಆಗಾಗ ಕಳಿಸುತ್ತಿದ್ದೆ. ಮಕ್ಕಳು ಮತ್ತು ಗಂಡಂದಿರ ವ್ಯವಸ್ಥೆ ಬಗ್ಗೆಯೂ ಮಾತು ಕಥೆ ಧಾರಾಳವಾಗಿ ನಡೆದಿತ್ತು. ಮಕ್ಕಳ ಟೂಶನ್ನೆ ತೊಂದರೆ ಆಗುತ್ತೋ ಇಲ್ಲವೋ, ತಿಂಡಿ ತೀರ್ಥ ಜಾಸ್ತಿ ಮಾಡಿದಲ್ಲಿ ಏನು ಮಾಡುವುದು, ಫ್ರಿಡ್ಜಿನಲ್ಲಿ ಇಡಬೇಕೋ, ಫ್ರೀಜರ್ನಲ್ಲಿ ಒಳ್ಳೇದೋ ಅಂತ ಕೂಡ ಬಿಸಿ ಚರ್ಚೆ ನಮ್ಮ ಗುಂಪಿನಲ್ಲಿ . ಗುಂಪಿನ ನಿರ್ದಿಷ್ಟ ವಿಷಯದಿಂದ ಬಹು ದೂರ ಹೋಗಿಬಿಡುತಿತ್ತು . ಸಧ್ಯ ಮಹಿಳಾ ದಿನ ಬಂದರೆ ಸಾಕು ಅನ್ನಿಸೊವಷ್ಟು ಹರಟೆಗಳು.

ರಾತ್ರೀ ಹಗಲೂ ನಡೆದ ಚರ್ಚೆಗಳಿಗೆ ಕೊನೆಯೆಂಬಂತೆ , ಮಹಿಳಾ ದಿನದ ಸಂಭ್ರಮ ಬಂದೇ ಬಿಟ್ಟಿತು. ಶನಿವಾರ -ಭಾನುವಾರ ರಸ್ತೆಗಳಲ್ಲಿ ಅಷ್ಟೊಂದು ಸಂಚಾರ ಇರುವುದಿಲ್ಲ . ಮನೆ ಬಿಟ್ಟ ನಾನು ನಿರಾಳವಾಗಿ ಡ್ರೈವ್ ಮಾಡಿಕೊಂಡು, ರೇಡಿಯೋ ನಲ್ಲಿ ಬರುವ ಹಾಡು ಕೇಳಿಕೊಂಡು ಹೊರಟೆ. ಆ ಹಾಡಿನ ಮಧ್ಯೆ ಜೋರಾಗಿ whats app ಟಿಂಗಿಣಿಸಿತು. ನೋಡಿದ್ರೆ ಒಂದು ಗೆಳತಿಯ ಕಾರು ಕೆಟ್ಟು ಅರ್ಧ ದಾರಿಯಲ್ಲಿ ನಿಂತಿದ್ದಾಳೆ. ತಕ್ಷಣವೇ "ಮಹಿಳಾ ದಿನ" ದ organizerಗೆ ಫೋನಿಸಿ, ನಾನು ಸ್ವಲ್ಪ ತಡವಾಗಿ, ಇನ್ನೊಬ್ಬರನ್ನು ಕರೆದುಕೊಂಡು ಬರುತ್ತೇನೆ ಎಂದು ಹೇಳಿ ಫೋನ್ ಕಟ್ ಮಾಡಿದೆ. whats app ನಲ್ಲಿ ಸ್ಟೇಟಸ್ ಅಪ್ಡೇಟ್ ಮಾಡಿ, ಯಾರು ಯಾರು ಎಲ್ಲಿದ್ದಾರೆ ಎಂದು ಚೆಕ್ ಮಾಡಿ, ಗಾಡಿ ಮುಂದೆ ಓಡಿಸಿದೆ. ಕೆಟ್ಟ ಕಾರಿಗೆ ಒಂದು ಗತಿ ಕಾಣಿಸಬೇಡವೇ ? ಗೆಳತಿಯ ಕಾರಿನ ಪಕ್ಕದಲ್ಲಿ ನಿಲ್ಲಿಸಿ ಅವಳು ಫೋನ್ ಕರೆ ಮುಗಿಸುವ ತನಕ ಕಾಯ್ದು, ಅವಳನ್ನು ಕರೆದುಕೊಂಡು ಕೆಫೆ ಕಡೆಗೆ ವಾಹನವನ್ನು ಚಲಾಯಿಸಿದೆ.

ಕೆಫೆ ಸೇರಿದ ಎಲ್ಲಾ ಮಹಿಳಾ ಮಣಿಗಳು, ಒಬ್ಬರನ್ನು ಒಬ್ಬರು ಕಂಡು ಸಂತೋಷಗೊಂಡು .ಮಹಿಳಾ ದಿನಕ್ಕೆ ಫುಲ್ ಹಾಜರಿ ಅಂತ ಹೆಮ್ಮೆ ಪಟ್ಟುಕೊಂಡು , ಮಹಿಳಾ ದಿನದ ಬಗೆ ಒಂದೆರೆಡು ಮಾತಾಡಿ , ಮಹಿಳೆಯ ಸ್ವಾಂತಂತ್ರವನ್ನು ಹೇಗೆ ಕಾಪಾಡಿಕೊಳ್ಳಬೇಕು ಎಂದು ಚರ್ಚೆ ಮಾಡಿ, ಅಲ್ಲಿ ಕಾಫಿ ತಿಂಡಿ ಸವಿದು, ಒಬ್ಬರಿಗೊಬ್ಬರು ಬೀಳ್ಕೊಟ್ಟು ಹೊರಟೆವು.

ಮಹಿಳಾ ದಿನದ ಸಂಭ್ರಮವನ್ನೇ ಮೆಲುಕು ಹಾಕುತಿದ್ದ ನನಗೆ ಪೋಸ್ಟ್ ನಲ್ಲಿ ರಸ್ತೆ ಸಂಚಾರ ನಿಗಮದವರು ವಾಹನ ಚಲಾಯಿಸುವಾಗ ಫೋನ್ ಬಳಸಿದ್ದಕ್ಕೆ ಕೇವಲ ೩೦೦$ ಫೈನ್ ಅನ್ನು ಗಿಫ್ಟ್ cheque ತರಹ ಕಳಿಸಿದ್ದರು . ಫೈನ್ ಕಟ್ಟಬೇಕಾದ ನನಗೆ ಮಹಿಳಾ ದಿನಾಚರಣೆ ಮರೆಯಲಾರದ ಆಚರಣೆ !! ▪

ಕನ್ನಡದಲ್ಲಿ ಟೈಪ್ ಮಾಡೋದು ಹೇಗೆ

ಹೊರನಾಡ ಚೆಲುಮೆ - ಸೆಪ್ಟೆಂಬರ್ ೨೦೧೩ ರ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ೨೦೧೩ ರ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದ ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

1. http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

   ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

   ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ

ವಿಶ್ವ ಮಹಿಳಾ ದಿನಾಚರಣೆ – ಮಾರ್ಚ್ ೮

ಲೇಖಕರು ಈ ಸಂದರ್ಭಕ್ಕೆ ಸರಿಯೆನ್ನುವಂತೆ, ಈ ಕಂತಿನಲ್ಲಿ

"ಸಾಮ್ರಾಜ್ಯ ಲಕ್ಷ್ಮಿ - ರಾಜವಂಶಗಳಲ್ಲಿ ಮಹಿಳೆಯ ಪಾತ್ರ"

ಎಂಬ ಹಿನ್ನಲೆ ಇಟ್ಟುಕೊಂಡು ಬರೆದ ವಿಶಿಷ್ಟ ಪ್ರಸ್ತುತಿ ಇದು.

ನಮ್ಮ ಮನವಿಯನ್ನು ಪುರಸ್ಕರಿಸಿ, ಲೇಖನ ಸರಣಿಗೆ ಮಾರ್ಪಾಟು ಮಾಡಿ, ಸಕಾಲದಲ್ಲಿ ಬರಹವನ್ನು ಕೊಟ್ಟಂತಹ

ಶ್ರೀ ನಾಗಶೈಲ ಕುಮಾರ್ ಅವರಿಗೆ

ಓದುಗರೆಲ್ಲರ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತಿದ್ದೀವಿ.

~ ಹೊರನಾಡ ಚಿಲುಮೆಯ ಸಂಪಾದಕೀಯ ಸಮಿತಿ ~

ಲೇಖಕರ ಮುನ್ನುಡಿ.

ನಾವಿಂದು ಅಳವಡಿಸಿಕೊಂಡಿರುವ ಸಂಸ್ಕೃತಿ, ಬಾಷೆ, ಕಲೆ ಇವುಗಳೆಲ್ಲಾ ಇಂದು ನಿನ್ನೆಯದಲ್ಲ. ಸಾವಿರಾರು ವರ್ಷಗಳಿಂದ ಹಲವಾರು ರಾಜವಂಶಗಳ ಆಶ್ರಯಗಳಲ್ಲಿ ಬೆಳೆದು ಬಂದಂತದ್ದು. ಅದರಲ್ಲೂ ಮೈಸೂರಿನ ಶ್ರೀಮಂತ ಸಂಸ್ಕೃತಿಗೆ ಮೂಲ ವಿಜಯನಗರ, ಅದಕ್ಕೆ ಮೂಲ ಹೊಯ್ಸಳ ಸಂಸ್ಕೃತಿಯೆನ್ನಬಹುದು. ಕನ್ನಡನಾಡಿನ ನೆಚ್ಚಿನ, ಹೆಮ್ಮೆಯ ರಾಣಿ ಶಾಂತಲೆ ಹೊಯ್ಸಳರ ಪಟ್ಟಮಹಾದೇವಿ, ಚತುರೆ, ಭರತನಾಟ್ಯ ಪ್ರವೀಣೆ. ಅವಳ ನಂತರ ಇನ್ನೂ ಹಲವು ರಾಣಿಯರು ಹೊಯ್ಸಳ ಸಾಮ್ರಾಜ್ಯದ ಯಶಸ್ಸಿಗೆ ಪರೋಕ್ಷವಾಗಿ ಕಾರಣರಾಗಿದ್ದಾರೆ. ಇಲ್ಲಿ ೧೧೭೩ ರಿಂದ ೧೨೨೦ ರವರೆಗೆ ರಾಜ್ಯಭಾರ ನಡೆಸಿದ ಹೊಯ್ಸಳರ ಅತ್ಯಂತ ಯಶಸ್ವೀ ದೊರೆ ವೀರ ಬಲ್ಲಾಳನ ರಾಣಿ ಉಮಾದೇವಿಯ ಪರಿಚಯದ ಬಗ್ಗೆ ಒಂದು ಕಿರು ಪ್ರಯತ್ನವಿದೆ.

ಊರುಗಳ ಹಳೆಯ ಹೆಸರು	ಇಂದಿನ ಹೆಸರು
ಸೊಸೆವೂರು	ಅಂಗಡಿ
ವೇಲಾಪುರಿ	ಬೇಲೂರು
ದ್ವಾರಸಮುದ್ರ	ಹಳೇಬೀಡು
ಲೊಕ್ಕಿಗುಂಡಿ	ಲಕ್ಕುಂಡಿ
ಭಂಡಾರ ವಾಡೆ	ಅರಸೀಕೆರೆ
ಬೆಳಗುವತ್ತಿ	ಬೆಳವತ್ತಿ
ಬಳ್ಳಿಗಾಮೆ	ಬಳ್ಳಿಗಾವಿ
ಹಾನುಂಗಲ್ಲು	ಹಾನಗಲ್

ಗರುಡ ಎಂದರೆ ಮಹಾರಾಜನ ಆಪ್ತ ಅಂಗರಕ್ಷಕ. ಗರುಡ ಸೇನ ಎಂಬುದು ಹೊಯ್ಸಳ ಸೇನೆಗಿದ್ದ ಹೆಸರು.

ವೇಲಾಪುರಿಯಲ್ಲಿ ಅರಸ ಬಿಟ್ಟಿಗನು ಕಟ್ಟಿಸಿದ್ದ ವಿಜಯನಾರಾಯಣ ದೇವಳದ ವೈಭವ ದಿನಗಳೆದಂತೆ ಭರತಖಂಡದಲ್ಲೆಲ್ಲಾ ಹಬ್ಬುತ್ತಿತ್ತು. ಕರ್ನಾಟ ದೇಶದವರೇ ಆದ ಗಂಗ,ಕದಂಬ, ಚಾಲುಕ್ಯ, ಕಲಚೂರಿ, ರಾಷ್ಟ್ರಕೂಟರಿರಲಿ, ದಕ್ಷಿಣದ ಪಲ್ಲವ, ಚೋಳ, ಪಾಂಡ್ಯರೋ, ಕಾಕತೀಯ, ಅಥವಾ ಉತ್ತರದ ನಂದ, ಮೌರ್ಯ, ಗುಪ್ತ, ಪ್ರತೀಹಾರ, ಹೀಗೆ ಯಾರೇ ಇರಲಿ, ಇದುವರೆವಿಗೂ ಇಂತಹದೊಂದು ದೇಗುಲದ ನಿರ್ಮಾಣ ಮಾಡಿರಲಿಲ್ಲ.

ನೋಡಿದಷ್ಟೂ ನೋಡಬೇಕೆನಿಸುವ, ಹೇಳಿದಷ್ಟೂ ಹೇಳಬೇಕೆನಿಸುವ, ಕೇಳಿದಷ್ಟೂ ಕೇಳಬೇಕೆನಿಸುವ ಸೊಗಸು ಆ ದೇಗುಲ. ವೈಕುಂಠವೇ ಧರೆಗೆ ಬಂದಂತೆ, ಶ್ರೀಮನ್ನಾರಾಯಣನೇ ಅಲ್ಲಿ ಬಂದು ನೆಲೆಸಿದಂತೆ, ಸ್ವರ್ಗದ ಅಪ್ಸರೆಯರೆಲ್ಲಾ ಅಲ್ಲೇ ಸೇರಿರುವಂತೆ, ದೇಗುಲದ ನಿರ್ಮಾಣವಾಗಿತ್ತು.

"ಎಂಥಾ ಚೆಲುವೋ ನನ್ನಪ್ಪ, ಕಣ್ಣೆರಡೂ ಸಾಲದಾಗಿದೆ ನಿನ್ನ ಚೆಲುವನ್ನು ತುಂಬಿಕೊಳ್ಳಲು, ಹೆಸರಿಗೆ ತಕ್ಕಂತೆ ನೀನು ಚೆನ್ನಕೇಶವನೇ ತಂದೆ" ವಯಸ್ಸಾಗಿದ್ದ ಮಾಚವ್ವೆ ಆನಂದಬಾಷ್ಪ ಸುರಿಸುತ್ತಿದ್ದಳು.

ಮುಂದಿನ ಪುಟ ನೋಡಿ ...

"ಹೌದಬ್ಬೆ, ಈ ಗುಡಿಯ ಸೊಬಗ ಕಂಡು, ವೈಕುಂಠಕ್ಕಿಂತ ಇದೇ ಸೊಗಸಾಗಿದೆಯೆಂದು ಸಾಕ್ಷಾತ್ ವಿಷ್ಣುವೇ ಆನಂದದಿಂದ ಇಲ್ಲಿಗೆ ಬಂದಂತಿದೆ ಅಲ್ಲವೇ, ಸರಿ ಸರಿ, ನಡಿ ಹೊತ್ತಾಯಿತು, ಜಾನುವಾರುಗಳಿಗೆ ಮೇವನ್ನಿಡಬೇಕು, ಕರುಗಳು ಹಾಲಿಗೆ ಕಾದಿರುತ್ತವೆ, ಇನ್ನು ನಾಳೆ ನಸುಕಿಗೇ ಕೆರೆಯ ಕೆಲಸಕ್ಕೆ ಹೋಗಬೇಕು" ಎನ್ನುತ್ತಾ ರೇವಕ ವಯಸ್ಸಾಗಿದ್ದ ತಾಯಿಯನ್ನು ಹೂವಿನಂತೆ ಎತ್ತಿ ಭುಜದ ಮೇಲೆ ಕುಳ್ಳಿರಿಸಿಕೊಂಡು ಹಟ್ಟಿಯ ಕಡೆಗೆ ನಡೆದ.

ಅರಸ ವೀರಬಲ್ಲಾಳರಾಯ ಪಟ್ಟಮಹಿಷಿ ಉಮಾದೇವಿ, ರಾಣಿ ಕೇತಲದೇವಿ, ರಾಣಿ ಪದ್ಮಲಾದೇವಿ ಮತ್ತು ಇತರ ರಾಜ ಪರಿವಾರದೊಡನೆ, ಹೊಯ್ಸಳರ ಕುಲದೇವತೆ ಸೊಸೆವೂರಿನ ವಸಂತಮ್ಮನಿಗೆ ವಿಶೇಷ ಪೂಜೆಗಳನ್ನು ಸಲ್ಲಿಸಿ, ತನ್ನ ರಾಣಿಯರಿಗೆ ತನ್ನ ವಂಶದವರ ಶೌರ್ಯಸಾಹಸಗಳ ಇತಿಹಾಸದ ಪರಿಚಯಮಾಡಿಸಿದ. ನಂತರ ಪ್ರಜೆಗಳ ಕುಂದು ಕೊರತೆಗಳ ವಿಚಾರಿಸಿಕೊಂಡು, ಬೇಕಾದ ಅನುಕೂಲಗಳಿಗೆ ಏರ್ಪಾಡು ಮಾಡಿ, ದೋರಸಮುದ್ರಕ್ಕೆ ಹಿಂದಿರುಗುತ್ತಿದ್ದ. ದೋರಸಮುದ್ರ ರಾಜಧಾನಿಯಾಗಿದ್ದರೂ ವೇಲಾಪುರಿಯ ಮೇಲಿನ ವ್ಯಾಮೋಹ ತಗ್ಗಿರಲಿಲ್ಲ, ರಥಗಳನ್ನು ವಿಜಯನಾರಾಯಣನ ಮಂದಿರದ ಬಳಿಗೆ ತಂದಾಗ ನೇಸರನು ಪಡುವಣದೆ ಮರೆಯಾಗುತ್ತಿದ್ದ.

ದೇಗುಲದೊಳಗಿನ ನವರಂಗ ಮಂಟಪದಲ್ಲಿ ದೇವಾಲಯದ ನರ್ತಕಿಯ ಸೇವೆ ನಡೆಯುತ್ತಿತ್ತು. ಸಂಗೀತ, ವಾದ್ಯಗಳೊಡನೆ ನೃತ್ಯವೂ ಮಿಳಿತವಾಗಿ ಸ್ವರ್ಗವೇ ಅಲ್ಲಿ ಸೃಷ್ಠಿಯಾಗಿತ್ತು. ಕಂಬಗಳ ಮೇಲಿನ ಮದನಿಕೆಯರೂ ಜೀವ ತಳೆದು ಜೊತೆ ಸೇರಿದಂತಿತ್ತು.

ರಾಣಿಯರು ದೇವಾಲಯದೊಳಗೆ ನಡೆದರೆ, ರಾಜ ಅಂದಿನ ಕೆಲಸ ಮುಗಿಸಿ ಮಾರನೆಯ ದಿನದ ಕೆಲಸಗಳ ಬಗ್ಗೆ ಶಿಲ್ಪಿಗಳಿಗೆ ಸೂಚನೆಗಳನ್ನು ನೀಡುತ್ತಿದ್ದ ಮುಖ್ಯ ರುವಾರಿ, ಶಿಲ್ಪಿ ಮಲ್ಲೋಜನ ಬಳಿ ಸಾಗಿದ.

ನಡು ಬಾಗಿಸಿ, ಕೈ ಮುಗಿದ ಮಲ್ಲೋಜ, "ದೊರೆಗಳು ಅಪ್ಪಣೆ ಕೊಡಿಸಿದ್ದರೆ ನಾನೇ ತಮ್ಮ ಬಳಿ ಬರುತ್ತಿದ್ದೆ" ಎಂದು ಹೇಳುತ್ತಲೇ ನೆಲದೆ ಮಲಗಿ ದೊರೆಯ ಪಾದಕ್ಕೆ ವಂದಿಸಿದ.

"ಇಂತಹ ಅದ್ಭುತವಾದ ಕಲಾಕೃತಿಯನ್ನು ಸೃಷ್ಠಿಸುತ್ತಿರುವ ನಿಮಗೆ ಅಷ್ಟೊಂದು ಬಿಡುವೆಲ್ಲಿದೆ ಮಲ್ಲೋಜ, ಅಜ್ಜ ವಿಷ್ಣುವರ್ಧನರು ಸುಮಾರು ಎಂಟು ದಶಮಾನಗಳ ಹಿಂದೆ ಆರಂಭಿಸಿ, ವಿಜಯನಾರಾಯಣನನ್ನು ಪ್ರತಿಷ್ಠಾಪಿಸಿದ ಈ ದೇವಾಲಯದ ಕೆಲಸ ನಿಮ್ಮತಂದೆ ದಾಸೋಜರ ಶ್ರಮದಿಂದ ಅಚ್ಚರಿ ಮೂಡುವಂತೆ ನಡೆಯಿತು. ಈಗ ಅದಕ್ಕೆ ನಿಮ್ಮ ಪರಿಶ್ರಮವೂ ಸೇರಿ ಸಾಟಿಯೇ ಇಲ್ಲದಂತಹ ಕಲಾಮಂದಿರ ನಿರ್ಮಾಣವಾಗುತ್ತಿದೆ". ಎಂದು ಶಿಲ್ಪಿಯನ್ನು ಪ್ರಶಂಸಿದ ಬಲ್ಲಾಳ ದೊರೆ.

ಅಷ್ಟರಲ್ಲಿ ದೊರೆಯನ್ನು ಅರಸುತ್ತ ಮಹಾರಾಣಿ ಉಮಾದೇವಿಯ ಆಗಮನವಾಯಿತು. "ಅಹುದು ಮಲ್ಲೋಜರೇ ಇಲ್ಲಿನ ಕಲೆಯನ್ನು ನೋಡುತ್ತಿದ್ದರೆ, ದೇವಲೋಕದಿಂದ ಬಂದ ಶಿಲ್ಪಿಗಳೇನೋ ನೀವು ಎಂದು ಸಂದೇಹ ಮೂಡುತ್ತದೆ. ನಿಮ್ಮಂತಹ ಶ್ರೇಷ್ಠಕಲಾವಿದರನ್ನು ಪಡೆದದ್ದು ಕರ್ನಾಟ ದೇಶದವರ ಭಾಗ್ಯ". ಎಂದು ಅರಸನ ಮಾತಿಗೆ ಇಂಬುಕೊಟ್ಟಳು.

"ನೀನು ನುಡಿವುದು ನಿಜವೇ ದೇವಿ, ಇವರುಗಳು ದೇವಲೋಕದ ಶಿಲ್ಪಿಗಳೇ, ಎಷ್ಟೇ ಆದರೂ ನಮ್ಮ ಹಿರಿಯವ್ವೆಯರಾದ ಪಟ್ಟಮಹಿಷಿ ಶಾಂತಲಾದೇವಿಯವರ ಊರಾದ ಬಳ್ಳಿಗಾಮೆಯವರಲ್ಲವೇ, ಈ ಶಿಲ್ಪಿಗಳೆಲ್ಲ".

"ಮಹಾರಾಜರು ತಪ್ಪು ಭಾವಿಸದಿದ್ದರೆ ನನ್ನದೊಂದು ಸಣ್ಣ ಕೋರಿಕೆ" ನಯವಾಗಿ ನುಡಿದಳು ಉಮಾದೇವಿ, "ಇಲ್ಲಿ ಭಕ್ತರ ಅನುಕೂಲಕ್ಕಾಗಿ ಧಾನ್ಯಾಗಾರ ಮತ್ತು ಪಾಕಶಾಲೆಗಳನ್ನು ನಿರ್ಮಿಸಬೇಕೆಂದು ನಾವು ಮೂವರು ರಾಣಿಯರು ಮಾತನಾಡಿಕೊಂಡೆವು. ನಿಮ್ಮ ಅಭ್ಯಂತರವಿಲ್ಲದಿದ್ದರೆ.."

" ಅಭ್ಯಂತರವೇಕೆ ದೇವಿ, ಅದೂ ನಡೆಯಲಿ ಎಷ್ಟಾದರೂ ಹಿರಿಯವ್ವೆ ಶಾಂತಲಾದೇವಿಯ ಮನೆಗೆ ಸೊಸೆಯಾಗಿ ಬಂದವರವಲ್ಲವೆ ತಾವು, ಅವರಂತೆಯೇ ನಿಮ್ಮಲ್ಲೂ ಪ್ರಜಾಹಿತ ಚಿಂತನೆ ತುಂಬಿದೆ" ಎಂದು ದೇವಿಯನ್ನು ಪ್ರಶಂಶಿಸಿ, " ಆಗಬಹುದಲ್ಲವೇ ಮಲ್ಲೋಜ", ಎಂದ ದೊರೆ.

" ಆಗಲಿ ದೊರೆ, ಅದರ ಬಗ್ಗೆ ವಾಸ್ತುಶಿಲ್ಪಿಗಳೊಡನೆ ನಾಳೆಯೇ ಮಾತನಾಡುತ್ತೇನೆ" ಎಂದು ಮತ್ತೊಮ್ಮೆ ರಾಜ ರಾಣಿಯರ ಪಾದಕ್ಕೆ ನಮಿಸಿ ಮಲ್ಲೋಜ ಹಿಂದೆ ಸರಿದ.

****

" ದೊರೆಯೇ ಏಕೋ ಇಂದು ನಿಮ್ಮ ಮನಸ್ಸು ಸರಿಯಿಲ್ಲವೆಂದೆನಿಸುತ್ತಿದೆ. ಈ ದೇಗುಲದೊಳಗೆ ಬಂದ ಮೇಲೆ ಇನ್ನೂ ಹೆಚ್ಚು ಚಿಂತಾಕ್ರಾಂತರಾದಂತಿದೆ. ಬೇರೆಲ್ಲರ ಮುಂದೆ ನುಡಿಯಬಾರದೆಂದು ನಾನು ಸುಮ್ಮನಿದ್ದೆ. ವಿಜಯನಾರಾಯಣನನ್ನು ವಂದಿಸಲೂ ಒಳಗೆ ಬರದೆ ಹೊರಗೇ ಉಳಿದಿರಲ್ಲ, ಎಂದೂ ಹೀಗೆ ಮಾಡಿದವರಲ್ಲ ನೀವು", ಕಳಕಳಿಯಿಂದ ನುಡಿದಳು ಉಮಾದೇವಿ. ಮುಂದಿನ ಪುಟ ನೋಡಿ ...

“ಆ ವಿಜಯನಾರಾಯಣನಿಗೆ ನನ್ನ ಮೊಗವನ್ನು ತೋರಿಸಲು ನಾಚಿಕೆಯಾಗುತ್ತದೆ ದೇವಿ, ನನ್ನ ಅಜ್ಜನ ಆಸೆಯನ್ನು ಪೂರೈಸಲಾಗುತ್ತಿಲ್ಲವಲ್ಲವೆಂಬ ಕೊರಗು”, ಎಂದ ಬಲ್ಲಾಳ.

ಉಮಾದೇವಿ ದಿಗಿಲುಗೊಂಡಳು” ಅಂತಹುದೇನಾಯಿತು ದೊರೆ, ಈ ವಿಜಯನಾರಾಯಣನ ದೇವಾಲಯವನ್ನು ಇನ್ನೂ ವಿಜೃಂಭಣೆಯಿಂದ ಕಟ್ಟಿಸುತ್ತಿರುವಿರಿ, ದೋರಸಮುದ್ರದಲ್ಲೂ ದೇವಾಲಯಗಳ ಕೆಲಸ ಭರದಿಂದ ಸಾಗುತ್ತಿದೆ. ಬೆಳವಾಡಿ ಅಮೃತಾಪುರ, ಅರಸೀಕೆರೆ, ಹೀಗೆ ಎಲ್ಲೆಲ್ಲೂ ಮಂದಿರಗಳ ನಿರ್ಮಾಣವಾಗುತ್ತಿದೆ”. ದೊರೆ ಮೌನವಾಗಿದ್ದ.

“ ದೇಗುಲಗಳ ನಿರ್ಮಾಣವಾದಂತೆಲ್ಲಾ ಸಾವಿರಾರು ಶಿಲ್ಪಿಗಳಿಗೆ ಕೆಲಸ ದೊರೆಯುತ್ತದೆ, ಪೂಜೆಯ ಕೆಲಸ ಬ್ರಾಹ್ಮಣರದಾಗುತ್ತದೆ, ಹೂವಾಡಿಗರು ಬರುತ್ತಾರೆ, ವರ್ತಕರು ಬರುತ್ತಾರೆ, ನರ್ತಕಿಯರು, ಸಂಗೀತಗಾರರು ಸೇರುತ್ತಾರೆ. ದೇಗುಲಗಳಲ್ಲೇ ವಿದ್ಯಾಲಯಗಳನ್ನು ಪ್ರಾರಂಭಿಸಿದರೆ, ಶಿಕ್ಷಕರು ಬೇಕಾಗುತ್ತಾರೆ, ಹೊಸದೊಂದು ಗ್ರಾಮವೇ ನಿರ್ಮಾಣವಾಗುತ್ತದೆ. ಲೆಕ್ಕಿಗರು, ಸುಂಕದವರು, ಗಾವುಂಡರು, ತಳವಾರರು ಹೀಗೆ ಅನೇಕ ಉದ್ಯೋಗಗಳೂ ಸೃಷ್ಟಿಯಾಗುತ್ತದೆ. ಇದೆಲ್ಲವೂ ನಿಮ್ಮ ಅಜ್ಜನವರು ಕಂಡ ಹೊಯ್ಸಳ ಸಾಮ್ರಾಜ್ಯದ ಕನಸಲ್ಲವೇ. ವ್ಯಾಪಾರ ವಹಿವಾಟುಗಳೂ ನಿಮ್ಮ ಕಾಲದಲ್ಲಿ ಹೆಚ್ಚಾಗಿದೆ. ಅಷ್ಟೇ ಅಲ್ಲ ಕವಿವರ್ಯರಾದ ಸುಮನೋಬಾಣ, ಕವಿಚಕ್ರವರ್ತಿ ಜನ್ನ, ರುದ್ರಭಟ್ಟ, ಹರಿಹರ, ಕವಿಚಕ್ರವರ್ತಿ, ಹೀಗೆ ಮಹಾನ್ ವಿದ್ವಾಂಸರ ಸಮೂಹವೇ ಹೊಯ್ಸಳ ಸಾಮ್ರಾಜ್ಯದಲ್ಲಿ ಮಿನುಗುತ್ತಿವೆ. ನಿಮ್ಮ ಅಜ್ಜನವರ ಪರಂಪರೆಯನ್ನು ನೀವು ಅವರ ಆತ್ಮಕ್ಕೆ ಸಂತೋಷ ತರುವಂತೆ ಮುಂದುವರೆಸಿಕೊಂಡು ಹೋಗುತ್ತಿರುವಿರಿ, ಇನ್ನೂ ಏಕೆ ಕೊರಗುವಿರಿ” ಉಮಾದೇವಿ ದೊರೆಯ ಮುಖವನ್ನು ನೋಡುತ್ತಾ, ಅವನನ್ನು ಸಮಾಧಾನಗೊಳಿಸಲೆತ್ನಿಸಿದಳು.

ಎಷ್ಟು ಹೊತ್ತಾದರೂ ಹಿರಿಯ ರಾಣಿ ಮತ್ತು ದೊರೆ ಬರದಿರುವದನ್ನು ಕಂಡು ರಾಣಿ ಕೇತಲಾದೇವಿ ಮತ್ತು ರಾಣಿ ಪದ್ಮಲಾದೇವಿ, ಇವರಿರುವಲ್ಲಿಗೇ ಬಂದರು. ಅವರೆಲ್ಲರ ನಡುವಲ್ಲೂ ಮುಚ್ಚುಮರೆ ಮಾಡದಂತ ಅನ್ಯೋನ್ಯತೆ ಇತ್ತು. ಅಸೂಯೆ, ಅಸಮಾಧಾನಗಳ ಅರಿವೂ ಇರಲಿಲ್ಲ.

ಬಲ್ಲಾಳ ದೊರೆಯ ಗರುಡ, ಕುವರಲಕ್ಷ್ಮನು ಅರಸರ ಪರಿವಾರ ನಿಂತಿರುವಲ್ಲಿಗೇ ಸುಖಾಸೀನಗಳನ್ನು ತಂದಿರಿಸಿ ಅವರಿಗೆ ಕುಳಿತುಕೊಳ್ಳಲು ಅನುಕೂಲ ಮಾಡಿಕೊಟ್ಟನು, ಅವನ ಸತಿ ಸುಗ್ಗಲದೇವಿ ಎಲ್ಲರಿಗೂ ಹಿತವಾದ ಪಾನೀಯಗಳ ವ್ಯವಸ್ಥೆ ಮಾಡಿದಳು.
ಮಾತು ಮುಂದುವರೆಸಿದ ಬಲ್ಲಾಳರಾಯ,“ ಅಬ್ಬ, ಅದೆಷ್ಟು ಹೇಳಿದೆ ದೇವಿ, ನೀನು ಹೇಳಿದ ನುಡಿಯೆಲ್ಲವೂ ನಿಜವೇ, ಆದರೆ ಅದ್ಯಾವುದೂ ನನ್ನ ಕೊರಗಲ್ಲ. ಬಿಟ್ಟಿದೇವ ದೊರೆಗಳಿಗೆ ಅಖಂಡ ಕರ್ನಾಟ ರಾಜ್ಯವನ್ನು ಸ್ಥಾಪಿಸಬೇಕೆನ್ನುವ ಮಹದಾಸೆಯಿತ್ತು. ತಾವು ಸ್ವತಂತ್ರ ರಾಜ್ಯ ಸ್ಥಾಪಿಸಿ, ಸಾಮ್ರಾಟರಾಗಿ ಯಾಗಾದಿಗಳನ್ನು ಮಾಡಲು ಅವಕಾಶವಿರುವುದಿಲ್ಲವೆಂಬುದೂ, ಅವರು ಜೈನ ಧರ್ಮವನ್ನು ತ್ಯಜಿಸಿ, ವೈಷ್ಣವ ಸಂಪ್ರದಾಯವನ್ನು ಸ್ವೀಕರಿಸಿದ ಒಂದು ಉದ್ದೇಶವಾಗಿತ್ತು. ಆದರೆ ದುರದೃಷ್ಟವಶಾತ್ ಅವರ ಕಾಲದಲ್ಲಿ ಹೊಯ್ಸಳ ರಾಜ್ಯ ಸ್ವತಂತ್ರ ರಾಜ್ಯವಾಗಲೇ ಇಲ್ಲ. ಅವರಂಥ ಧೀರ ಪುರುಷನಿಗೆ ತಕ್ಕ ಮಗನಾಗದೆ ನನ್ನ ಅಪ್ಪಾಜಿ ಅವರು ಗಳಿಸಿದ್ದ ರಾಜ್ಯ ಕೋಶಗಳನ್ನೆಲ್ಲಾ ತಮ್ಮ ಸುಖಲೋಲುಪತೆಯಿಂದ ಕಳೆದು, ನಮ್ಮರಾಜ್ಯವನ್ನು ಹಿನ್ನಡೆಸಿದರು” ಬಲ್ಲಾಳ ನೋವಿನಿಂದ ನುಡಿದ.

“ಆದರೇನು ದೊರೆ, ಸಿಂಹಾಸನವೇರಿದ ಕೂಡಲೇ ಅದೆಷ್ಟೇ ತೊಂದರೆಗಳೆದುರಾದರೂ ಎಲ್ಲವನ್ನೂ ನಿವಾರಿಸಿಕೊಂಡಿರಿ. ಚೋಳ, ಕಲಚೂರಿ, ಯಾದವ, ಎಲ್ಲರೊಡನೆ ಹೋರಾಡಿ, ಉಚ್ಚಂಗಿ, ಲೊಕ್ಕಿಗುಂಡಿ, ಬನವಾಸಿ, ಅಣ್ಣಿಗೇರಿ, ಗದಗ, ಗುತ್ತವೊಳಲು, ಹಾನಂಗಲ್, ಗುತ್ತಿ ಮುಂತಾದ ಅನೇಕ ಊರುಗಳನ್ನೆಲ್ಲಾ ಹೊಯ್ಸಳ ಸಾಮ್ರಾಜ್ಯಕ್ಕೆ ಸೇರಿಸಿ ಕರ್ನಾಟ ಸಾಮ್ರಾಟನೆನಿಸಿಕೊಂಡಿರುವಿರಿ. ನಿಮ್ಮ ಅಜ್ಜನವರು ಬಯಸಿದುದು ಅದನ್ನೆ ತಾನೇ”.

“ಆದರೆ ಈ ಹೋರಾಟಗಳು ಮುಗಿಯುವಂತೆಯೇ ಇಲ್ಲವಲ್ಲ ದೇವಿ. ಎಲ್ಲವೂ ಮುಗಿಯಿತು ಎನ್ನುವಷ್ಟರಲ್ಲಿಯೇ ಈಗ ಮತ್ತೊಂದೆರಡು ಕಡೆಯಿಂದ ವಿಪತ್ತುಗಳು ಎದುರಾಗುವಂತಿದೆ. ವೇಲಾಪುರಿ, ಮತ್ತು ರಾಜಧಾನಿಗಳೆರಡನ್ನೂ ನೋಡಿಕೊಂಡು, ಈ ದೇವಾಲಯಗಳ ಕಾರ್ಯ, ರಾಜ್ಯಾಡಳಿತ, ಪ್ರಗತಿಯಲ್ಲಿರುವ ಅನೇಕ ಯೋಜನೆಗಳು ಇವೆಲ್ಲಕ್ಕೂ ನಾನು ಮಹತ್ವ ಕೊಡಬೇಕು. ಆದರೆ ಅದ್ಯಾವುದೂ ಸಾಧ್ಯವಾಗುತ್ತಲೇ ಇಲ್ಲ. ನನ್ನಜೀವನವೂ ಬರಿಯ ರಣರಂಗದಲ್ಲಿಯೇ ಕಳೆದು ಹೋಗುತ್ತಿದೆ. ನಾನೇನೂ ಇನ್ನೂ ಯುವಕನಲ್ಲ, ಎಲ್ಲವನ್ನೂ ಒಟ್ಟಾಗಿ ನಿಭಾಯಿಸಲು. ನನಗೆ ಬಂದಿರುವ ಸುದ್ದಿಯ ಪ್ರಕಾರ ನಾನು ಕೂಡಲೇ ನೊಣಂಬವಾಡಿಗೆ ಹೋಗಿ ಅಲ್ಲಿನ ಪರಿಸ್ಥಿತಿಯನ್ನು ಹತೋಟಿಗೆ ತರಬೇಕು, ನಂತರ ಎರಂಬರೆಗೆ ಹೋಗಬೇಕಾಗಬಹುದು. ಹಾನುಂಗಲ್ಲಿನಲ್ಲೂ ಇನ್ನೂ ತೊಂದರೆಯಿದೆಯೆಂದು ಸುದ್ದಿ. ಅಲ್ಲಿನ ಕದಂಬ ಕಾಮದೇವನನ್ನೂ ಹತೋಟಿಗೆ ತರಬೇಕು. ಇದೀಗ ತಾನೇ ನಾನು ಲೊಕ್ಕಿಗುಂಡಿಯಿಂದ ಹಿಂದಿರುಗಿದ್ದೇನೆ, ಮತ್ತೆ ಇಲ್ಲಿನ ಜವಾಬ್ದಾರಿಯನ್ನು ಬಿಟ್ಟು ಹೋಗುವುದು ಸರಿಬರುತ್ತಿಲ್ಲ”. ಇಷ್ಟು ಹೇಳಿ ನಿಟ್ಟುಸಿರಿಟ್ಟು ದೊರೆ ಮೌನವಾಗಿ ಕುಳಿತನು.

ಮುಂದಿನ ಪುಟ ನೋಡಿ ...

"ನಮ್ಮ ಪಾಲಿನ ದೇವರಿಗೆ ಅಳಿಲು ಸೇವೆಯನ್ನಾದರೂ ಸಲ್ಲಿಸಲು ಅವಕಾಶವಿದೆಯಲ್ಲವೇ ದೊರೆ" ಕೆಲ ನಿಮಿಷಗಳ ಮೌನದ ನಂತರ ಮಾತನಾಡಿದಾಕೆ ರಾಣಿ ಕೇತಲದೇವಿ. ದೊರೆಗೆ ರಾಣಿ ಹೇಳುತ್ತಿರುವುದೇನೆಂದು ಅರಿವಾಗದೆ ಗೊಂದಲವಾಯಿತು. "ಹೌದು ದೊರೆ, ಅನುಭವಿಗಳೂ, ಧೀರೆಯೂ ಅದ ಅಕ್ಕ ಉಮಾದೇವಿ, ನಿಮ್ಮ ಮಾರ್ಗದರ್ಶನದಲ್ಲಿ ರಾಜಕಾರಣವ ಅರಿತಿರುವ ನಾನು, ನಮ್ಮ ಬೆನ್ನೆಲುಬಾಗಿ ತಂಗಿ ಪದ್ಮಲೆ ಇರುವಾಗ ನೀವೇಕೆ ಚಿಂತಿಸುತ್ತೀರಿ. ಅಲ್ಲದೆ ಹಿರಿಯರೇ ಇರುವ ಪಂಚ ಮಂತ್ರಿಗಳ ಪರಿಷತ್ತಿರುವಾಗ ನೀವು ನಿಶ್ಚಿಂತರಾಗಿ ಹೋಗಿಬನ್ನಿ".

ಪದುಮಲದೇವಿ ಈಗ ದನಿಗೂಡಿಸಿದಳು" ಕುವರ ನರಸಿಂಹನೂ ಈಗ ಬೆಳೆದು ನಿಂತಿದ್ದಾನೆ, ಸಕಲ ವಿದ್ಯಾಪಾರಂಗತನೂ ಆಗಿದ್ದಾನೆ. ಅವನಿಗೆ ಅಪ್ಪಾಜಿಯವರೊಡನೆ ರಣರಂಗಗಳಿಗೆ ಹೋಗಿ ಅನುಭವ ಪಡೆಯಬೇಕೆಂಬ ಬಯಕೆ. ತನ್ನ ಶೌರ್ಯ ಸಾಹಸಗಳಿಂದ, ತಂದೆ, ಮುತ್ತಾತನ ಹೆಸರಿಗೆ ಕೀರ್ತಿ ತರಬೇಕೆಂಬ ಮಹದಾಸೆ. ನನ್ನ ಬೆನ್ನುಹತ್ತಿ ಪೀಡಿಸುತ್ತಿರುತ್ತಾನೆ. ನಿಮಗೇನೂ ಅವನು ಹೊರೆಯಾಗಲಾರ. ನಿಮಗೀ ಮಾತನ್ನು ಹೇಳಬೇಕೆಂದು ಅವನ ಒತ್ತಾಯ. ಅವನನ್ನು ಕರೆದೊಯ್ದರೆ ನಿಮ್ಮ ಕೆಲಸವೂ ಹಗುರವಾಗಬಹುದು ಪ್ರಭು"

"ಆಯಿತಲ್ಲ ಪ್ರಭು, ಇಲ್ಲಿನ ಸಕಲ ಉಸ್ತುವಾರಿಯನ್ನೂ ನಮಗೆ ಬಿಡಿ. ಸುತ್ತಲಿನ ಸಾಮಂತರ ಜವಾಬ್ದಾರಿಯನ್ನು ನಾನು ಹೊರುತ್ತೇನೆ, ಜೊತೆಗೆ ದಣ್ಣಾಯಕರೂ ಇರುತ್ತಾರೆ. ಇನ್ನು ನಿಮ್ಮ ದಂಡಯಾತ್ರೆಯ ಸಿದ್ಧತೆಯೊಂದೇ ಬಾಕಿ, ನಡೆಯಿರಿ ಇನ್ನು", ಎನ್ನುತ್ತಾ ತೀರ್ಮಾನದ ಮಾತನ್ನಾಡಿದಳು ಪಟ್ಟಮಹಿಷಿ ಉಮಾದೇವಿ.

ಮಾರನೆಯ ದಿನ ಮಂತ್ರಿ ಪರಿಷತ್ತು ಮತ್ತು ದಣ್ಣಾಯಕರುಗಳೊಡನೆ ಸಮಾಲೋಚನೆಯ ನಂತರ ರಾಜನು ಮತ್ತೊಮ್ಮೆ ವಿಜಯ ಯಾತ್ರೆಗೆ ಹೊರಟ. ದೋರಸಮುದ್ರದ ಶಾಂತಲೇಶ್ವರ, ಹೊಯ್ಸಳೇಶ್ವರ, ದೇಗುಲಗಳಲ್ಲಿ, ಆದಿನಾಥ, ಶಾಂತಿನಾಥ ಮತ್ತು ಪಾರ್ಶ್ವನಾಥ ಬಸದಿಗಳಲ್ಲಿ ವಿಶೇಷ ಪೂಜೆಗಳನ್ನು ಸಲ್ಲಿಸಲಾಯಿತು.

ಇಮ್ಮಡಿ ವೀರಬಲ್ಲಾಳನ ಸತಿಯರಾದ ಪಟ್ಟದರಾಣಿ ಉಮಾದೇವಿ, ಕೇತಲದೇವಿ, ಪದುಮಲದೇವಿ, ಬಮ್ಮಲಾದೇವಿ, ತುಳುವಲದೇವಿ, ಚೋಳಮಹಾದೇವಿ, ಅಭಿನವ ಕೇತಲದೇವಿ, ಎಲ್ಲರೂ ಸೇರಿ ರಾಜನಿಗೆ ಆರತಿಯೆತ್ತಿ ಬೀಳ್ಕೊಟ್ಟರು.

****

ವೀರಬಲ್ಲಾಳನು ವಿಶ್ರಾಂತಿರಹಿತನಾಗಿ ನಾಲ್ಕು ವರ್ಷಗಳ ಕಾಲ ಹಾನುಂಗಲ್, ವಿಜಯಸಮುದ್ರ ಮುಂತಾದೆಡೆಗಳಲ್ಲಿ ಸತತವಾಗಿ ಹೊಯ್ಸಳ ಸಾಮ್ರಾಜ್ಯವನ್ನು ಭದ್ರಪಡಿಸುತ್ತಾ, ಬಂಡಾಯವೇಳುತ್ತಿದ್ದ ಮಾಂಡಲೀಕರ ಸದ್ದಡಗಿಸುತ್ತಾ, ದಣ್ಣಾಯಕರುಗಳೊಡನೆ ತನ್ನ ವಿಜಯಯಾತ್ರೆಯನ್ನು ಮುಂದುವರೆಸಿರಲು, ಇತ್ತ ಕೇತಲಾದೇವಿಯು ಮಂತ್ರಿಪರಿಷತ್ತಿನ ಸಹಯೋಗದೊಂದಿಗೆ ದ್ವಾರಸಮುದ್ರದ ಆಡಳಿತ ನೋಡಿಕೊಳ್ಳಲಾರಂಬಿಸಿದಳು.

ಹಿರಿಯರಾಣಿ ಉಮಾದೇವಿ ರಾಜಧಾನಿ, ವೇಲಾಪುರಿ, ಭಂಡಾರ ವಾಡ, ದೇವಳ್ಗೆ ನಾಡು ಮತ್ತು ಸುತ್ತಲಿನ ಪ್ರದೇಶಗಳ ರಕ್ಷಣೆಯ ಭಾರವನ್ನು ಹೊತ್ತಳು. ತನ್ನ ತವರೂರಾದ ಭಂಡಾರವಾಡವನ್ನು ಉಪರಾಜಧಾನಿಯನ್ನಾಗಿ ಮಾಡಿ ಅಲ್ಲಿ ಕೆರೆಯೊಂದರ ನಿರ್ಮಿಸಿದಳು.

ರಾಜ ಹೊರಗಿರುವ ಸುಸಮಯಕ್ಕಾಗಿ ಹಲವಾರು ಪುಂಡ ಸಾಮಂತರು ಕಾಯುತ್ತಲೂ ಇದ್ದರು. ಅವರಲ್ಲಿ ಬೆಳಗುವತ್ತಿಯ ಸಿಂಧ ಈಶ್ವರನಂತೂ ಅಧಿಕವಾಗಿ ಉಪಟಳ ನೀಡಲಾರಂಭಿಸಿದ್ದ.

ಬಲ್ಲಾಳನು ಕುವರ ನರಸಿಂಹನನ್ನು ತನ್ನೊಡನೆ ವಿಜಯ ಯಾತ್ರೆಗೆ ಕರೆದೊಯ್ಯದೆ, ರಾಜ್ಯಾಢಳಿತದ ಅನುಭವವು ಬರಲೆಂದು ಅವನನ್ನು ರಾಜಧಾನಿಯಲ್ಲೇ ಉಳಿಸಿದ್ದ

"ಯವರಾಜರೆ, ಬೆಳಗುವತ್ತಿಯಲ್ಲಿ ಸಿಂಧ ಈಶ್ವರನ ಉಪಟಳ ಹೆಚ್ಚಾಗಿದೆಯಂತೆ, ಹೊಯ್ಸಳರ ಆಳ್ವಿಕೆಯನ್ನು ಬದಿಗೊತ್ತಿ ಸೇವುಣರ ಪರವಾಗಿ ಸಂಚು ನಡೆಸುತ್ತಿರುವನಂತೆ", ಧೂತನೊಬ್ಬ ರಾಜ್ಯದ ಉತ್ತರದ ಕಡೆಯಿಂದ ಬಂದು ಯುವರಾಜನಿಗೆ ತಿಳಿಸಿದ. ತಂದೆಯಂತೆಯೇ ನರಸಿಂಹನೂ ಮಹತ್ವಾಕಾಂಕ್ಷಿ, ಮತ್ತು ವೀರನಾಗಿದ್ದ, ಆಗವನಿಗಿನ್ನೂ ಹದಿಮೂರು-ಹದಿನಾಲ್ಕು ವರ್ಷಗಳಷ್ಟೆ.

" ಮಹಾರಾಜರು ಇಲ್ಲವೆಂದು ಅವರಿಗೆ ಸೊಕ್ಕಾಗಿರಬಹುದು, ಹೊಯ್ಸಳ ರಾಜ್ಯದಲ್ಲಿ ಪ್ರತಿಯೊಬ್ಬನೂ ಅಪ್ರತಿಮ ವೀರ, ರಣಶೂರ ಎಂದು ತಿಳಿದಂತಿಲ್ಲ" ಎಂದು ಉಮಾದೇವಿ ನುಡಿದಳು.

"ಹೌದು ದೊಡ್ಡವ್ವೆ, ಇಂತಹ ಕ್ಷುಲ್ಲಕ ಪುಂಡರನ್ನು ಸದೆಬಡಿಯಲು ಮಹಾರಾಜರೇ ಇರಬೇಕೆಂದೇನಿಲ್ಲ, ನಾನು ಹೋಗಿ ಹತ್ತಿಕ್ಕಿ ಬರಲೇ, ಅಪ್ಪಣೆ ಕೊಡಿ." ಎಂದು ನರಸಿಂಹ ನುಡಿದ.

"ಬೇಡ ಕುಮಾರ, ನೀನಿನ್ನೂ ಯುದ್ಧರಂಗದಲ್ಲಿ ಪಳಗಬೇಕು, ನೀನು ರಾಜಧಾನಿಯಲ್ಲೇ ಇದ್ದು ಆಡಳಿತ ನೋಡಿಕೋ, ಅದೇ ನಿಮ್ಮ ಅಪ್ಪಾಜಿಯವರ ಉದ್ದೇಶ ಕೂಡ. ನಾನು ಬೆಳಗುವತ್ತಿಗೆ ಹೋಗಿ, ಅವನ ಸೊಲ್ಲಡಗಿಸಿ ಬರುತ್ತೇನೆ"

ಉಮಾದೇವಿಯ ಮಾತೇ ಸರಿಯೆಂದು ಪಂಚಪ್ರಧಾನರೂ ಮತ್ತು ಇತರ ರಾಣಿಯರೂ ಒಪ್ಪಿಕೊಂಡರು.

ಮುಂದಿನ ಪುಟ ನೋಡಿ ...

ಉಮಾದೇವಿ ರಾಜಧಾನಿ ಮತ್ತು ವೇಲಾಪುರಿಯ ರಕ್ಷಣೆಗೆಂದು, ಗರುಡ ಪಡೆಯೊಂದನ್ನುಳಿಸಿ ತಾನು, ಬೆಳಗುವತ್ತಿಯೆಡೆ ಸೈನ್ಯ ನಡೆಸಿದಳು. ದಾರಿಯುದ್ದಕ್ಕೂ ಜನರ ಆದರದ ಸತ್ಕಾರ ಹಾಗೂ ದೊರೆತ ಬೆಂಬಲಗಳಿಂದ ಮೂಕವಿಸ್ಮಿತಳಾಗಿ, ಮತ್ತಷ್ಟು ಆತ್ಮ ವಿಶ್ವಾಸದೊಂದಿಗೆ ಬೆಳಗುವತ್ತಿಯ ಹೊರಗೆ ಬೀಡು ಬಿಟ್ಟಳು.

ಈ ರೀತಿಯ ಮುತ್ತಿಗೆಯನ್ನು ಈಶ್ವರನು ಎದುರು ನೋಡಿರಲಿಲ್ಲ. ಆದರೂ ಹೆಣ್ಣು ತಾನೇ ಎಂಬ ಉದಾಸೀನ ಮನೋಭಾವ ಅವನಲ್ಲಿತ್ತು. ಆದರೆ ಆದ ಕದನದಲ್ಲಿ ಉಮಾದೇವಿಯ ಭೀಕರ ರೂಪ ಕಂಡು ಕಂಗಾಲಾದ. ತನಗೆ ಸಹಾಯ ದೊರೆತೀತೆಂದು ತನ್ನ ಆಶ್ರಯಧಾತರಾದ ಹಾನುಂಗಲ್ಲಿನ ಪ್ರಭುಗಳಲ್ಲಿಗೆ ಪರಾರಿಯಾದ.

ಆದರೆ ಮತ್ತೆ ಕೆಲವೇ ದಿನಗಳಲ್ಲಿ ಅವನು ಮತ್ತೆ ತಲೆಯೆತ್ತಿ ಉಪಟಳ ನೀಡಲಾರಂಭಿಸಿದಾಗ, ಮತ್ತೂ ಹೆಚ್ಚಿನ ಸೈನ್ಯದೊಡನೆ ಅವನನ್ನು ಮುತ್ತಿ ಅವನ ಹುಟ್ಟಡಗಿಸಿದಳು. ಅವನ ಹೆಡೆ ಮುರಿ ಕಟ್ಟಿ ಮತ್ತೆ ನಿನ್ನ ಬಗ್ಗೆ ಮಾತೇನಾದರೂ ಹೊಯ್ಸಳ ಸಾಮ್ರಾಜ್ಯದಲ್ಲಿ ಕೇಳಿಬಂದರೆ ಸಾವೇ ನಿನ್ನ ಗತಿ ಎಂದಳು. ಅವನ ಅಪಾರ ಸಂಪತ್ತನ್ನು ವಶಪಡಿಸಿಕೊಂಡು, ಅವನು ಮತ್ತೆ ತಲೆಯೆತ್ತಲು ಅವಕಾಶವಿಲ್ಲದಂತ ಸ್ಥಿತಿಯನ್ನುಂಟು ಮಾಡಿದಳು

ಬದುಕುಳಿದದ್ದೇ ಹೆಚ್ಚೆನ್ನುತ್ತ, ಹೊಯ್ಸಳರ ಸಾಮ್ರಾಜ್ಯದ ಬಗ್ಗೆ ವಿಷ ಕಾರುತ್ತ, ಈಶ್ವರ ತಲೆತಪ್ಪಿಸಿಕೊಂಡ.

ಯಶಸ್ವಿಯಾದ ಸಂತೋಷದಲ್ಲಿ ಉಮಾದೇವಿ ರಾಜಧಾನಿಗೆ ಹಿಂದಿರುಗಿದಳು. ಮಾರ್ಗಮಧ್ಯದಿ ತನ್ನ ಬಹುದಿನದ ಬಯಕೆಯಂತೆ ಬಳ್ಳಿಗಾಮೆಗೆ ಭೇಟಿಯಿತ್ತಳು.

ಬಳ್ಳಿಗಾಮೆ ಶೈವ, ವೈಷ್ಣವ, ಜೈನ ಧರ್ಮಗಳ ಪ್ರಮುಖ ಕೇಂದ್ರ, ಶಾತವಾಹನ, ಕದಂಬ, ಚಾಲುಕ್ಯ ಹೀಗೆ ಎಲ್ಲ ರಾಜವಂಶಗಳೂ ಅದನ್ನೊಂದು ಶಿಲ್ಪಕಲೆ, ಧಾರ್ಮಿಕ, ಸಾಂಸ್ಕೃತಿಕ ನೆಲೆವೀಡನ್ನಾಗಿಸಿಕೊಂಡಿದ್ದವು. ಕವಿಗಳು, ಶರಣರು, ವಿದ್ವಜ್ಜನರು, ಶಿಲ್ಪಿಗಳು, ಕಲಾವಿದರು, ಹೀಗೆ ಎಲ್ಲಾರೀತಿಯ ಜ್ಞಾನಿಗಳಿಂದ ಮೆರೆಯುತ್ತಿದ್ದ ಸ್ಥಳ. ಭರತಖಂಡದ ಎಲ್ಲೆಡೆಯೂ ಬೌದ್ಧಧರ್ಮ ಕ್ಷೀಣಿಸುತ್ತಾ ಬಂದಿದ್ದರೂ, ಬಳ್ಳಿಗಾಮೆಯು ಬೌದ್ಧರಿಗೂ ಪವಿತ್ರ ಕ್ಷೇತ್ರವಾಗುಳಿದಿತ್ತು.

ಉಮಾದೇವಿಯು ಕೇದಾರೇಶ್ವರ, ತ್ರಿಪುರಾಂತಕೇಶ್ವರ ದೇವಾಲಯಗಳಿಗಷ್ಟೇ ಅಲ್ಲದೆ, ಜೈನ ಬಸದಿಗಳು, ಬೌದ್ಧಾಲಯಗಳಿಗೂ, ವಿದ್ಯಾಸಂಸ್ಥೆಗಳ ಅಭಿವೃದ್ಧಿಗೆ ಅಪಾರವಾಗಿ ಧನವನ್ನು ಕಾಣಿಕೆಯಿತ್ತು, ಪ್ರಜೆಗಳ ಅನುಗ್ರಹಕ್ಕೆ ಪಾತ್ರಳಾದಳು.

ಹೊಯ್ಸಳ ವಂಶದ ಹೆಮ್ಮೆಯ ಅರಸಿ ಶಾಂತಲಾ ದೇವಿಯ ತವರು ಎಂಬ ಅಭಿಮಾನ ಉಮಾದೇವಿಗೆ. ತಾನೂ ಆಕೆಯಂತೆಯೇ ಸಂಗೀತ ನೃತ್ಯವಾದ್ಯಗಳ ಪ್ರವೀಣೆ ಎಂಬುದೊಂದು ಹೆಮ್ಮೆ. ಆಕೆ ನರ್ತಿಸಿರಬಹುದಾದ ನವರಂಗಗಳು, ಓಡಾಡಿರಬಹುದಾದ ತಾಣಗಳ ಸಂದರ್ಶಿಸಿ ಮುದಗೊಂಡಳು.

ರಾಜಧಾನಿಗೆ ಹಿಂದುರಿಗಿದ ಉಮಾದೇವಿಗೆ ಅಭೂತಪೂರ್ವ ಸ್ವಾಗತ ದೊರೆಯಿತು. ತನ್ನ ರಾಣಿಯರ ಬಗ್ಗೆ ತಾನು ಇರಿಸಿದ್ದ ವಿಶ್ವಾಸ, ನಂಬಿಕೆ ಸುಳ್ಳಾಗದೆ, ಬಲ್ಲಾಳನು ಹೊಯ್ಸಳ ಸಾಮ್ರಾಜ್ಯದ ಉನ್ನತಿಗೆ ಕಾರಣರಾದ ರಾಣಿಯರನ್ನು ತನ್ನ ಸಾಮ್ರಾಜ್ಯ ಲಕ್ಷ್ಮಿಯರೆಂದೇ ತಿಳಿದ.

ಖ್ಯಾತ ಕಾವ್ಯ 'ಜಗನ್ನಾಥವಿಜಯ' ರಚಿಸಿದ ಆಸ್ಥಾನ ಕವಿ, ರುದ್ರಭಟ್ಟ ಬಲ್ಲಾಳನನ್ನು "ಉಮಾಕಾಮಿನೀ ಜೀವಿತೇಶ್ವರ" ಎಂದು ಸಂಭೋದಿಸಿದ್ದಾನೆ. ▪

ವಿಜ್ಞಾನ

ಕ್ಯಾಂಡಲ್ ಜೊತೆ ಆಟ ಪಾಠ

ಸಂಕಲನ: ಬದರಿ ತ್ಯಾಮಗೊಂಡ್ಲು

ಬೇಕಾಗುವ ಸಾಮಗ್ರಿ:

- ವೈಟ್ ವಿನೆಗರ್
- ಬೇಕಿಂಗ್ ಸೋಡ
- ಒಂದು ಹೂಜಿಯಂತಹ ಪಾತ್ರೆ
- ಬೆಂಕಿ ಪೊಟ್ಟಣ
- ಕ್ಯಾಂಡಲ್ ಗಳು

ವಿಧಾನ:

- ನಾಲ್ಕೈದು ಕ್ಯಾಂಡಲ್ ಗಳನ್ನೂ ಒಂದು ಅಡಿ ಅಂತರದಲ್ಲಿ ಹಚ್ಚಿಡಿ
- ಹೂಜಿಯಲ್ಲಿ ಬೇಕಿಂಗ್ ಸೋಡಾ ಹಾಕಿ ವಿನೆಗರ್ ಸೇರಿಸಿ
- ನೊರೆ ನೊರೆಯಾಗಿ ದ್ರಾವಣವು ಉಕ್ಕುತ್ತಾ ಬರುತ್ತದೆ
- ನೊರೆ ಕಡಿಮೆಯಾದ ಮೇಲೆ ನಿಧಾನವಾಗಿ, ನೀರು ಚೆಲ್ಲದಂತೆ ಹೂಜಿಯನ್ನು ಹತ್ತಿರುವ ಕ್ಯಾಂಡಲ್ ಜ್ವಾಲೆಯ ಬಳಿ ಬಗ್ಗಿಸಿ
- ಕ್ಯಾಂಡಲ್ ನ ಜ್ವಾಲೆ ಆರಿ ಹೋಗುತ್ತದೆ

ಏನಾಗುತ್ತಿದೆ

ಬೆಂಕಿಯು ಉರಿಯಲು ಆಕ್ಸಿಜನ್ ಬೇಕು. ಆಕ್ಸಿಜನ್ ಇಲ್ಲದ ಹಾಗೆ ಮಾಡುವುದರಿಂದ ಬೆಂಕಿಯನ್ನು ಆರಿಸಬಹುದು. ವಿನೆಗರ್ ಎನ್ನುವುದು ದುರ್ಬಲ ಅಮ್ಲವಾಗಿದ್ದು (ಅಸಿಟಿಕ್ ಆಸಿಡ್), ಬೇಕಿಂಗ್ ಸೋಡ ಒಂದು ಬೇಸ್ ಆಗಿರುತ್ತದೆ (ಸೋಡಿಯಂ ಬೈ ಕಾರ್ಬೋನೇಟ್). ಇವೆರಡರ ಮಿಶ್ರಣ ಮಾಡುವುದರಿಂದ, ಕಾರ್ಬೋನಿಕ್ ಆಸಿಡ್ ಉತ್ಪತ್ತಿಯಾಗುತ್ತದೆ. ಕಾರ್ಬೋನಿಕ್ ಆಸಿಡ್ ಅಸ್ಥಿರವಾಗಿದ್ದು, ನೀರು ಮತ್ತು ಕಾರ್ಬನ್ ಡೈ ಆಕ್ಸೈಡ್ ಆಗಿ ಪರಿವರ್ತಿತವಾಗುತ್ತದೆ. ಆ ನೊರೆ ನೊರೆಯಾಗಿ ಉಕ್ಕುವುದು ಈ ಕಾರ್ಬನ್ ಡೈ ಆಕ್ಸೈಡ್ ಉತ್ಪತ್ತಿಯಿಂದಲೇ. ಹೂಜಿಯನ್ನು ನಿಧಾನವಾಗಿ ಕ್ಯಾಂಡಲ್ ಮೇಲೆ ಬಗ್ಗಿಸಿದಾಗ, ಕಾರ್ಬನ್ ಡೈ ಆಕ್ಸೈಡ್, ಜ್ವಾಲೆಗೆ ಆಕ್ಸಿಜನ್ ಇಲ್ಲದ ಹಾಗೆ ಮಾಡಿ ಅದನ್ನು ಆರಿಸುತ್ತದೆ ▪

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ಮೈತ್ರಿ – ಕನ್ನಡ ಚಲನಚಿತ್ರ ಪ್ರದರ್ಶನ

Sunday, 22nd March 2015, 3PM

Event Cinemas, Liverpool, Sydney

Booking only by SMS – Contact

Narayana – 0423634979

Nagabhushan – 0433763911

or email – sugamakannada@yahoo.com.au

Holi Mela

15 March 2015-

Blacktown Showground Precinct
Richmond Road, Blacktown, NSW

More Info: http://holimela.com.au/

ಈ ಸಂಚಿಕೆ ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.
ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.